ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಉದಯಗಿರಿ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಚಾನಲ್
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109 L2/RNP-1285/TMR/2025-27

Volume:05 ಸಂಪುಟ: 05 | Issue:219 ಸಂಚಿಕೆ: 219 | Date:24-09-2026 Thursday | RNI NO : KARKAN/2021/80805 | L2/RNP-1285/TMR/2025-27 | Page:4 ಪುಟ : 4 | Price: 1.00 ಬೆಲೆ: 1.00 ರೂ

# ದಲಿತ ಯುವಕನ ಹತ್ಯೆ ಖಂಡಿಸಿ ಬಿಜೆಪಿ ಎಸ್.ಸಿ. ಮೋರ್ಚಾ ಪ್ರತಿಭಟನೆ

# ಪರಮೇಶ್ವರ್, ಖರ್ಗೆ ವಿರುದ್ಧ ವೈ.ಹೆಚ್.ಹುಚ್ಚಯ್ಯ ವಾಗ್ದಾಳಿ

**ತುಮಕೂರು:** ಮಧುಗಿರಿ ತಾಲ್ಲೂಕು ಕಸಾಪುರ ಗ್ರಾಮದ ಪರಿಶಿಷ್ಟ ಜಾತಿಯ ಯುವಕ ಸಿಂಹಾದ್ರಿ ಹತ್ಯೆ ಖಂಡಿಸಿ ಜಿಲ್ಲಾ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ನೇತೃತ್ವದಲ್ಲಿ ಮುಖಂಡರು ಬುಧವಾರ ನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿ, ಹತ್ಯೆ ಪ್ರಕರಣವನ್ನು ತೀವ್ರವಾಗಿ ಖಂಡಿಸಿದರು. ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿಪತ್ರ ಸಲ್ಲಿಸಿ ಆರೋಪಿಗಳ ವಿರುದ್ಧ ಕಾನೂನುಕ್ರಮ ಕೈಗೊಂಡು, ಮೃತನ ಕುಟುಂಬಕ್ಕೆ ಸೂಕ್ತ ಪರಿಹಾರ, ರಕ್ಷಣೆ ನೀಡುವಂತೆ ಒತ್ತಾಯಿಸಿದರು.




ರಾಜ್ಯ ಬಿಜೆಪಿ ಕಾರ್ಯಕಾರಿಣಿ ಸಮಿತಿ ಸದಸ್ಯ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ವೈ.ಹೆಚ್. ಹುಚ್ಚಯ್ಯ ಮಾತನಾಡಿ, ಕಸಾಪುರದಲ್ಲಿ ಗಣಪತಿ ಮೆರವಣಿಗೆ ಸಂದರ್ಭದಲ್ಲಿ ಸಂಚು ನಡೆಸಿ ಪರಿಶಿಷ್ಟ ಜಾತಿಯ ಸಿಂಹಾದ್ರಿಯನ್ನು ಕೊಲೆ ಮಾಡಲಾಗಿದೆ. ನೀನು ಕೀಳು ಜಾತಿಯವನು ಗಣಪತಿ ಹತ್ತಿರ ಏಕೆ ಬಂದೆ ಎಂದು ಮಾರುತೇಶ್ ಎಂಬಾತ ಜಾತಿ ನಿಂದನೆ ಮಾಡಿ ಹಲ್ಲೆ ಮಾಡಿ ಹತ್ಯೆ ಮಾಡಿರುತ್ತಾನೆ. ಕೊನೆ ಹಿಂದಿರುವ ಪಿತೂರಿಯನ್ನು ತನಿಖೆ ಮಾಡಬೇಕು. ಇದೊಂದು ಅತ್ಯಂತ ಹೇಯ, ಅಮಾನವೀಯ, ನಾಗರೀಕ ಸಮಾಜ ತಲೆತಗ್ಗಿಸುವಂತಹ ಕೃತ್ಯ ಎಂದರು.

ಮೀಸಲಾತಿ ಕ್ಷೇತ್ರದಲ್ಲಿ ಗೆದ್ದು ದಲಿತರ ಹೆಸರಿನಲ್ಲಿ ಅಧಿಕಾರ ಅನುಭವಿಸುತ್ತಿರುವ ಜಿಲ್ಲಾ ಮಂತ್ರಿ ಪರಮೇಶ್ವರ್ ಅವರು ದಲಿತ ಯುವಕನ ಹತ್ಯೆ ನಡೆದರೂ ಅವನ ಮನೆಗೆ ಭೇಟಿ ನೀಡಿ, ಆತನ ತಾಯಿಗೆ ಸಾಂತ್ವನ ಹೇಳಿ ಪರಿಹಾರ ಕೊಡಿಸುವ ಕಾಳಜಿ ತೋರಿಸಿಲ್ಲ.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಗೃಹ ಸಚಿವ ಪ್ರಿಯಾಂಕ್ ಖರ್ಗೆ ತಮ್ಮ ಜವಾಬ್ದಾರಿ ಮರೆತು ಆರ್‌ಎಸ್‌ಎಸ್ ಹಿಂದೆ ಬಿದ್ದಿದ್ದಾರೆ. ಇಂತಹ ಅಸಮರ್ಥ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಹಿಂದಿನ ಅವಧಿಯಲ್ಲಿ ಗೃಹ ಮಂತ್ರಿ ಆಗಿದ್ದ ಡಾ. ಪರಮೇಶ್ವರ್ ಅವರು ಜೀರೋ ಟ್ರಾಫಿಕ್‌ನಲ್ಲಿ ಓಡಾಡಿದ್ದೇ ಹೆಚ್ಚು. ಅವರ ಅವಧಿಯಲ್ಲಿರಾಜ್ಯದಲ್ಲಿ 327 ದಲಿತರ ಕೊಲೆಯಾದವು, 620 ಅತ್ಯಾಚಾರ ಪ್ರಕರಣ ನಡೆದವು. ಇದು ಪರಮೇಶ್ವರ್ ಅವರು ಮಾಡಿದ ದಾಖಲೆಯ ಕಾರ್ಯ ಎಂದು ಟೀಕಿಸಿದರು. ತಮ್ಮ ಜಿಲ್ಲೆಯಲ್ಲಿ ದಲಿತ ಯುವಕನ ಕೊಲೆಯಾಗಿದ್ದರೂ ಜಿಲ್ಲಾ ಸಚಿವ ಪರಮೇಶ್ವರ್, ಜಿಲ್ಲಾಧಿಕಾರಿ ಮೃತನ ಮನೆಗೆ ಭೇಟಿ ನೀಡಿಲ್ಲ. ಇವರಿಗೆ ದಲಿತರೆಂದರೆ ಅಸಡ್ಡೆ. ಸಚಿವ ಪರಮೇಶ್ವರ್ ಅವರ ಕಾರ್ಯ ಇದ್ದೂ ಸತ್ತಂತಿದೆ. ಇವರ ಅಸಮರ್ಥತೆ ಖಂಡಿಸಿ ಬಿಜೆಪಿಯಿಂದ ಪರಮೇಶ್ವರ್ ಅವರ ಶವ ಯಾತ್ರೆ ಮಾಡಿ ಪ್ರತಿಭಟಿಸಬೇಕಾಗುತ್ತದೆ ಎಂದು ವೈ.ಹೆಚ್. ಹುಚ್ಚಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಎಸ್.ಸಿ. ಮೋರ್ಚಾ ಜಿಲ್ಲಾಧ್ಯಕ್ಷ ವೈ ಹೆಚ್. ರವಿಚಂದ್ರ ಮಾತನಾಡಿ, ಕಸಾಪುರದ ದಲಿತ ಯುವಕ ಸಿಂಹಾದ್ರಿ ಕೊಲೆ ಖಂಡನೀಯ. ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡು ಆತನ ತಾಯಿ ಅನ್ನಪೂರ್ಣಮ್ಮ ದಿಕ್ಕು ತೋಚದಂತಾಗಿದ್ದಾರೆ. ಇಂತಹ ಸ್ಥಿತಿಯಲ್ಲೂ ಜಿಲ್ಲೆಯ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಮೃತನ ಮನೆಗೆ ಹೋಗಿ ಆತನ ತಾಯಿಗೆ ಸಾಂತ್ವನ ಹೇಳಿ, ಪರಿಹಾರ ನೀಡುವ ಪ್ರಯತ್ನ ಮಾಡಲಿಲ್ಲ. ಕೂಡಲೇ ಅವರ ಕುಟುಂಬಕ್ಕೆ ಪರಿಹಾರ ನೀಡಬೇಕು, ಆರೋಪಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ಗೃಹ ಸಚಿವರು ವಿಫಲರಾಗಿದ್ದಾರೆ. ಸಮಾಜದ ಕಟ್ಟಕಡೆಯ ವ್ಯಕ್ತಿಯ ರಕ್ಷಣೆ ಮಾಡುವುದು ಸರ್ಕಾರದ ಕರ್ತವ್ಯ. ನಿರಂತರವಾಗಿ ಕೊಲೆ, ಅತ್ಯಾಚಾರ ಪ್ರಕರಣಗಳು ನಿರಂತರವಾಗಿ ನಡೆಯುತ್ತಿವೆ. ಜಾತಿ ಕಾರಣಕ್ಕೆ ಯಾರೊಬ್ಬರೂ ಬಲಿಯಾಗಬಾರದು. ಗೃಹ ಸಚಿವ ಪ್ರಿಯಾಂಕ್ ಖರ್ಗೆ, ಜಿಲ್ಲಾ ಸಚಿವ ಡಾ. ಪರಮೇಶ್ವರ್ ರಾಜೀನಾಮೆ ನೀಡಬೇಕು ಎಂದು ವೈ.ಹೆಚ್. ರವಿಚಂದ್ರ ಒತ್ತಾಯಿಸಿದರು.

ರೈತ ಮೋರ್ಚಾ ರಾಜ್ಯ ಉಪಾಧ್ಯಕ್ಷ ಬ್ಯಾಟರಂಗೇಗೌಡ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ಭೈರಣ್ಣ, ಹೆಚ್.ಎಂ. ರವೀಶಯ್ಯ, ಪ್ರಧಾನ ಕಾರ್ಯದರ್ಶಿ ಟಿ.ಹೆಚ್. ಹನುಮಂತರಾಜು, ಕಾರ್ಯದರ್ಶಿ ಕೆ. ವೇದಮೂರ್ತಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಸತ್ಯಮಂಗಲ

ಜಗದೀಶ್, ನಗರ ಅಧ್ಯಕ್ಷ ಧನುಷ್, ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಪ್ಪ, ಮಹಿಳಾ ಮೋರ್ಚಾ ನಗರ ಅಧ್ಯಕ್ಷೆ ವಸಂತಮ್ಮ, ಜಿಲ್ಲಾ ಎಸ್.ಸಿ. ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಅಂಜನಮೂರ್ತಿ, ಶಿವರಾಜ್, ಜಗದೀಶ್, ಕಾರ್ಯದರ್ಶಿ ಸಿದ್ಧಗಂಗಯ್ಯ, ನಗರ ಅಧ್ಯಕ್ಷನಾಗರಾಜು, ಮುಖಂಡರಾದ ಹೊಳಕಲ್ಲು ಆಂಜನಪ್ಪ, ನರಸಿಂಹಮೂರ್ತಿ, ವೆಂಕಟೇಶ್, ಪಿ. ಪ್ರತಾಪ್, ನವೀನ್‌ಕುಮಾರ್, ಬಿ.ಹೆಚ್. ಗಂಗಾಧರ್, ಜಗದೀಶ್, ವರದಯ್ಯ, ಧನಂಜಯ್, ಶಿವರಾಜ್, ಬಂಬೂ ಮೋಹನ್, ಹನುಮಂತರಾಜು, ಗಂಗೇಶ್ ಮೊದಲಾದವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ಸಿಂಹಾದ್ರಿ ಹತ್ಯೆ: ಆರೋಪಿಗಳ ಬಂಧನಕ್ಕೆ ಆಗ್ರಹ



**ತುಮಕೂರು:** ಮಧುಗಿರಿ ತಾಲೂಕಿನ ಕಸಾಪುರ ಗ್ರಾಮದ ದಲಿತ ಯುವಕ ಸಿಂಹಾದ್ರಿ ಅವರ ಹತ್ಯೆಯನ್ನು ಖಂಡಿಸಿರುವ ಜಿಲಾ. ಒಳಮೀಸಲಾತಿ ಹೋರಾಟ ಸಮಿತಿ ಹಾಗೂ ವಿವಿಧ ಸಂಘಟನೆಗಳ ಮುಖಂಡರು, ಪ್ರಕರಣದ ಆರೋಪಿಗಳನ್ನು ಕೂಡಲೇ ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ.

ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ ಬಳಿಕ ಮಾತನಾಡಿದ ಜಿಲ್ಲಾ ಒಳಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಡಾ.ವೈ.ಕೆ.ಬಾಲಕೃಷ್ಣಪ್ಪ ಅವರು, ಸೆ.20ರಂದು ಗಣೇಶ ಹಬ್ಬದ ಮೆರವಣಿಗೆ ಸಂದರ್ಭದಲಿ. ಗ್ರಾಮದ ಇತರೆ ಸಮುದಾಯದ ಯುವಕರು ಕ್ಷುಲಕ ಕಾರಣಕ್ಕೆ ಸಿಂಹಾದ್ರಿ ಅವರ ಮೇಲೆ ಹಲೆ.. ನಡೆಸಿ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಿದರು.

ರಾಜ್ಯದಲಿ.. ದಲಿತ ಗ್ರಹ ಸಚಿವರು ಇರುವ ಸಂದರ್ಭದಲ್ಲಿ ದಲಿತರ ಮೇಲೆಯೇ ಹೆಚ್ಚಿನ ಸಂಖ್ಯೆಯಲಿ ದೌರ್ಜನ್ಯಗಳು ನಡೆಯುತ್ತಿರುವುದು ದುರದೃಷ್ಟಕರ, ಮಧುಗಿರಿ ತಾಲೂಕಿನಲಿ ನಡೆದಿರುವ ದೌರ್ಜನ್ಯದಲಿ ಭಾಗಿಯಾಗಿರುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು ಹಾಗೂ ಅಧಿಕಾರಿಗಳು, ಜನಪ್ರತಿನಿಧಿಗಳು ಕಸಾಪುರಕ್ಕೆ ಭೇಟಿ ನೀಡಿ ಗ್ರಾಮದಲ್ಲಿ,, ಸೌಹಾರ್ದ ವಾತಾವರಣ ಮೂಡಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿದ್ದು, ರಾಯಚೂರು–ಯಾದಗಿರಿ ಜಿಲೆ..ಗಳಲ್ಲಿ ದಲಿತರ ಹತ್ಯೆ ಸೇರಿದಂತೆ ವಿವಿಧ ಘಟನೆಗಳು ನಡೆದಿವೆ. ಇಂತಹ ಪ್ರಕರಣಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲಿ.. ಒತ್ತಾಯಿಸಲಾಗಿದೆ, ಜಾತ್ಯತೀತತೆ, ಸಂವಿಧಾನ ರಕ್ಷಣೆ ಹಾಗೂ ಸಾಮಾಜಿಕ ನ್ಯಾಯದಲಿ.. ನಂಬಿಕೆ ಹೊಂದಿರುವ ಸರ್ಕಾರ ಇಂತಹ ಘಟನೆಗಳು ಮರುಕಳಿಸದಂತೆ ಸಂಬಂಧಿಸಿದ ಸಚಿವರು, ಅಧಿಕಾರಿಗಳು ಹಾಗೂ ದಲಿತಪರ ಸಂಘಟನೆಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಗತ್ಯಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು. ಗ್ರಾಮಗಳಲ್ಲಿ ಕೋಮುಸೌಹಾರ್ದತೆ ಮೂಡಿಸಬೇಕಾದ ಜವಾಬ್ದಾರಿ ಇರುವ ಇಲಾಖೆಗಳ ಅಧಿಕಾರಿಗಳು ಜಾಗೃತಿಯಿಂದ ಕೆಲಸ ನಿರ್ವಹಿಸಬೇಕಿದೆ. ಕಸಾಪುರದಲಿ ನಡೆದಿರುವ ದಲಿತ ಯುವಕನ ಹತ್ಯೆ ಪ್ರಕರಣದಲಿ.. ಸಮಗ್ರ ತನಿಖೆ ನಡೆಸಬೇಕು ಹಾಗೂ ಮುಂದೆ ಈ ರೀತಿಯ ವಾತಾವರಣ ನಡೆಯದಂತೆ ಎಚ್ಚರಿಕೆ ವಹಿಸುವುದರೊಂದಿಗೆ ಸೂಕ್ತ ರಕ್ಷಣೆ ಒದಗಿಸಲು ಜಿಲಾಡಳಿತ ಮುಂದಾಗಬೇಕು ಎಂದು ಆಗ್ರಹಿಸಿದರು. ಈ ವೇಳೆ ದಲಿತ ಮುಖಂಡರಾದ ವಾಲೆಚಂದ್ರಯ್ಯ, ನರಸಿಂಹಯ್ಯ ಕೇಬಲ್ ರಘುಕುಮಾರ್, ಶಿವನಂಜಪ್ಪ, ಗಂಗಾಧರ್, ಸೋರೆಕುಂಟೆ ನಂದೀಶ್, ಗೋಪಾಲಕೃಷ್ಣ, ಜಯಮೂರ್ತಿ, ರಾಜೇಶ್, ಎನ್. ರಾಜಣ್ಣ, ಅಕ್ಷರ ದಾಸೋಹ ಶಿವಣ ರೂಪಕಲಾ ಸೇರಿದಂತೆ ಇತರರು ಇದ್ದರು.

## ಹಿಂದೂ ಧರ್ಮಪ್ರೇಮಿಗಳ ಮೌನ ಆಶ್ಚರ್ಯಕರವಲ್ಲ: ಮಾಜಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಖಂಡನೆ

ಮಧುಗಿರಿ: ತಾಲ್ಲೂಕಿನ ಮಿಡಿಗೇಶಿ ಹೋಬಳಿಯ ಕಸಾಪುರ ಗ್ರಾಮದಲ್ಲಿ ಗಣೇಶ ಉತ್ಸವದ ಮೆರವಣಿಗೆ ವೇಳೆ ಪರಿಶಿಷ್ಟ ಜಾತಿಯ ಯುವಕನನ್ನು ಜಾತಿಯ ಕಾರಣಕ್ಕೆ ಕೊಲೆ ಮಾಡಿರುವುದು ಅತ್ಯಂತ ಬೇಸರದ ಹಾಗೂ ಖಂಡನೀಯ ಸಂಗತಿಯಾಗಿದೆ

ಎಂದು ಸಮಾಜ ಕಲ್ಯಾಣ ಇಲಾಖೆಯ ಮಾಜಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ದುರಂತ ಘಟನೆಯ ಕುರಿತು ತಮ್ಮ ಅಧಿಕೃತ ಫೇಸ್‌ಬುಕ್ ಖಾತೆಯಲ್ಲಿ ಖಂಡನಾತ್ಮಕ ಪೋಸ್ಟ್ ಹಂಚಿಕೊಂಡಿರುವ ಅವರು, ಸಮಾಜದಲ್ಲಿ ಇಂದಿಗೂ ಜೀವಂತವಾಗಿರುವ ಜಾತಿ ತಾರತಮ್ಯದ ವಿರುದ್ಧ ತೀವ್ರವಾಗಿ ವಾಗ್ದಾಳಿ ನಡೆಸಿದ್ದಾರೆ.

ಫೇಸ್‌ಬುಕ್ ಪೋಸ್ಟ್‌ನ ಪ್ರಮುಖ ಮುಖ್ಯಾಂಶಗಳು:

ಖಂಡನೀಯ ಕೃತ್ಯ: "ಗಣೇಶ ಹಬ್ಬದ ಶುಭ ಸಂದರ್ಭದಲ್ಲಿ ನಡೆದ ಮೆರವಣಿಗೆಯಲ್ಲಿ ನೃತ್ಯ ಮಾಡಲು ತೆರಳಿದ್ದ ಪರಿಶಿಷ್ಟ ಜಾತಿಯ ಯುವಕನನ್ನು ಕೇವಲ ಆತನ ಜಾತಿಯ ಕಾರಣಕ್ಕಾಗಿ ಹತ್ಯೆ ಮಾಡಿರುವುದು ಅತ್ಯಂತ ನೋವಿನ ಸಂಗತಿ. ಇಂತಹ ಘಟನೆಗಳನ್ನು ಸಮಾಜ ಎಂದಿಗೂ ಸಹಿಸಲು ಸಾಧ್ಯವಿಲ್ಲ" ಎಂದು ಅವರು ಹೇಳಿದ್ದಾರೆ.

ಅಂಬೇಡ್ಕರ್ ನಿರ್ಧಾರ ಮತ್ತು ಸದ್ಯದ ಪರಿಸ್ಥಿತಿ: "ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಯಾವ ಸಾಮಾಜಿಕ ದೌರ್ಜನ್ಯ ಮತ್ತು ತಾರತಮ್ಯಗಳ ಕಾರಣಕ್ಕೆ ಹಿಂದೂ ಧರ್ಮವನ್ನು ತ್ಯಜಿಸುವ ನಿರ್ಧಾರ ತಳೆದಿದ್ದರೋ, ಆ ಎಲ್ಲಾ ಕಾರಣಗಳು ಇಂದಿನ ದಿನಗಳಲ್ಲೂ ಸತ್ಯವಾಗುತ್ತಿವೆ ಎಂಬುದಕ್ಕೆ ಈ ಘಟನೆಯೇ ನಿದರ್ಶನ" ಎಂದು ಮಹದೇವಪ್ಪ ಮಾರ್ಮಿಕವಾಗಿ ವಿಶ್ಲೇಷಿಸಿದ್ದಾರೆ.

ಧರ್ಮಪ್ರೇಮಿಗಳ ಮೌನಕ್ಕೆ ವಿಮರ್ಶೆ: "ಇಷ್ಟೆಲ್ಲಾ ದೌರ್ಜನ್ಯ ಮತ್ತು ಕೊಲೆ ನಡೆದರೂ ಈ ಕುರಿತು ಯಾವೊಬ್ಬ ಹಿಂದೂ ಧರ್ಮದ ಪ್ರೇಮಿಗಳೂ ಚಕಾರ ಎತ್ತದೇ ಇರುವುದು ಆಶ್ಚರ್ಯಕರ ಸಂಗತಿಯೇನಲ್ಲ, ಬದಲಿಗೆ ಇಂದಿನ ವಾತಾವರಣದಲ್ಲಿ ಅದೊಂದು ಸಾಮಾನ್ಯ ಸಂಗತಿಯಂತಾಗಿದೆ" ಎಂದು ಅವರು ಅಸಮಾಧಾನ ಹೊರಹಾಕಿದ್ದಾರೆ.

## 330 ಶಾಲೆಗಳಲ್ಲಿ 12 ಶಾಲೆಯ 24 ಶಿಕ್ಷಕರಿಗೆ ಪ್ರಶಸ್ತಿ ಪ್ರಧಾನ

ಶನಿವಾರ 19– ಸೆಪ್ಟೆಂಬರ್ –2026 ರಂದು 2025–26 ನೇ ಸಾಲಿನ Actizen club ಉತ್ತಮ ಶಾಲೆ, ಉತ್ತಮ ಶಿಕ್ಷಕರ,ವಾರ್ಷಿಕ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ. ಸರ್ಕಾರಿ ಪ್ರಾಥಮಿಕ ಶಾಲೆ ಜಿಲ್ಲೆಯಿಂದ 330 ಶಾಲೆಗಳಲ್ಲಿ 12 ಶಾಲೆಯ 24 ಶಿಕ್ಷಕರನ್ನು ಪ್ರಶಸ್ತಿ ಪ್ರಧಾನ ಮಾಡಲಾಯಿತು.




ದೇಶ್ ಅಪ್ನಾಯೆನ್ ಸಹಯೋಗ ಫೌಂಡೇಶನ್ ಸಹಯೋಗದಲ್ಲಿ ನಡೆದ 2025–26 ನೇ ಸಾಲಿನ ಆಕ್ಟಿಜನ್ ಕ್ಲಬ್ ವಾರ್ಷಿಕ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿರುವ ಶ್ರೀ ಮಾಧವ ರೆಡ್ಡಿ ಉಪನಿರ್ದೇಶಕರು, ಮಧುಗಿರಿ ಶೈಕ್ಷಣಿಕ ವಿಭಾಗ,ತುಮಕೂರು ಜಿಲ್ಲೆ. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಪೌರತ್ವ ಮತ್ತು ನಾಗರಿಕ ಮೌಲ್ಯಗಳ ಬಗ್ಗೆ: ಶಾಲೆಗಳಿಗೆ ಬಹುಮಾನ ಮತ್ತು ಪ್ರಶಸ್ತಿಗಳನ್ನು ನೀಡುವುದರ ಜೊತೆಗೆ, ವಿದ್ಯಾರ್ಥಿಗಳಲ್ಲಿ citizenship, ನಾಗರಿಕ ಮೌಲ್ಯಗಳ ಬಗ್ಗೆ ತಿಳುವಳಿಕೆ ಮೂಡಿಸುವ ಹಲವಾರು ಚಟುವಟಿಕೆಗಳಲ್ಲಿ ಶಿಕ್ಷಕರು ಭಾಗವಹಿಸಿರುವುದು ಶ್ಲಾಘನೀಯ.

ಪಠ್ಯದ ಜೊತೆಗೆ ನಾಗರಿಕ ಶಿಕ್ಷಣ: ವಿದ್ಯಾರ್ಥಿಗಳನ್ನು ಕೇವಲ ಪಠ್ಯ ಪುಸ್ತಕದ ಕಲಿಕೆಗೆ ಸೀಮಿತಗೊಳಿಸಬಾರದು. ಅದರ ಜೊತೆಗೆ civil conduct code – ನಾಗರಿಕ ಬದುಕನ್ನು ಹೇಗೆ ನಡೆಸಬೇಕು, ನಮಗೆ ಬೇಕಾದ ಸವಲತ್ತುಗಳನ್ನು ಹೇಗೆ ಪಡೆದುಕೊಳ್ಳಬೇಕು, ನಾವು ಇರುವ ಸ್ಥಳದಲ್ಲಿ ನಾವೊಬ್ಬರೇ ಇಲ್ಲ, ನಮ್ಮ ಜೊತೆಗೆ ನಮ್ಮ ಸಮುದಾಯ ಇದೆ, ಅವರೆಲ್ಲರೂ ಒಪ್ಪುವ ಹಾಗೆ ಹೇಗೆ ಬದುಕಬೇಕು ಎಂಬುದನ್ನು ಕಲಿಸಬೇಕು.

ಹಕ್ಕುಗಳು ಮತ್ತು ಕರ್ತವ್ಯಗಳು: ಸಂವಿಧಾನದಲ್ಲಿ ನೀಡಿರುವ ಹಕ್ಕುಗಳ ಬಗ್ಗೆ ಮಾತ್ರ ನಾವು ಮಾತನಾಡಿದರೆ ಸಾಲದು. ನಮ್ಮ ಕರ್ತವ್ಯಗಳೂ ಇವೆ. ದೇಶದ ಐಕ್ಯತೆಗೆ ಭಂಗ ತರದಂತೆ ನಡೆದುಕೊಳ್ಳುವುದು ನಮ್ಮ ಕರ್ತವ್ಯ. ವಾಕ್ ಸ್ವಾತಂತ್ರ್ಯ ಇದೆ ಎಂದ ಮಾತ್ರಕ್ಕೆ ಇನ್ನೊಬ್ಬರನ್ನು ನೋಯಿಸಿ ಮಾತನಾಡುವ ಸ್ವಾತಂತ್ರ್ಯ ನಮಗಿಲ್ಲ. ನಾಲ್ಕು ಜನರ ಮಧ್ಯೆ ಇದ್ದಾಗ ಯಾವ ರೀತಿ ಡ್ರೆಸ್ ಹಾಕಬೇಕು, ಯಾವ ರೀತಿ ಮಾತನಾಡಬೇಕು, ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಕಲಿತಾಗ ಮಾತ್ರ ನಾವು civilised citizens ಆಗುತ್ತೇವೆ.

ಶಿಕ್ಷಕರಿಗೆ ಕರೆ: ಉನ್ನತ ವಿದ್ಯಾಭ್ಯಾಸದಲ್ಲಿ DIET ಮತ್ತು ಬಿಎಡ್ ಮಾಡುವಾಗ citizenship training ಎಂಬ ಕೋರ್ಸ್ ಇತ್ತು. ಅದನ್ನು ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಅವರಲ್ಲಿ ಜವಾಬ್ದಾರಿಯನ್ನು ತುಂಬುವ ಕೆಲಸ ಆಗಿದೆ. ಇದಕ್ಕಾಗಿ ದೇಶ್ ಅಪ್ನಾಯೆನ್ ಸಹಯೋಗ ಸಂಸ್ಥೆಗೆ ಅವರು ಧನ್ಯವಾದ ಹೇಳಿದರು.

ಈ ವರ್ಷದಿಂದ ಗ್ರಾಮೀಣ ಮೌಲ್ಯಗಳು, ಗ್ರಾಮೀಣ ಪರಿಸರದ ಬಗ್ಗೆ ಹೊಸ ಕಲಿಕೆಯನ್ನು ವಿದ್ಯಾರ್ಥಿಗಳಲ್ಲಿ ಮೂಡಿಸಲು ಅವಕಾಶ ಮಾಡಿಕೊಡಲಾಗಿದೆ. ಕೇವಲ ಮೌಲ್ಯ ಶಿಕ್ಷಣ, ದೈಹಿಕ ಶಿಕ್ಷಣ ಮಾತ್ರವಲ್ಲ, ಗ್ರಾಮೀಣ ವ್ಯವಸ್ಥೆಯ ಬಗ್ಗೆಯೂ ಕಲಿಯುವ ಅಗತ್ಯತೆ ಇದೆ.

ಶಿಕ್ಷಕರು ಅಪ್‌ಡೇಟ್ ಆಗಬೇಕು: ಇಂದು ಸವಾಲುಗಳು ಹೆಚ್ಚಿವೆ. ಹಿಂದೆ ವಿದ್ಯಾರ್ಥಿ ಕೇಳಿದ ಪ್ರಶ್ನೆಗೆ ಶಿಕ್ಷಕರು ಹೇಳಿದ ಉತ್ತರವೇ ಅಂತಿಮವಾಗಿತ್ತು. ಇಂದು ವಿದ್ಯಾರ್ಥಿ ಮನೆಗೆ ಹೋಗಿ ಮೊಬೈಲ್ ನಲ್ಲಿ ಸರ್ಚ್ ಮಾಡಿ "ಸರ್ ನೀವು ಹೇಳಿದ ಉತ್ತರ ತಪ್ಪು" ಎಂದು ಹೇಳುವ ಪರಿಸ್ಥಿತಿ ಇದೆ. As a teacher ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು. ಹಾಗಾಗಬಾರದು ಎಂದರೆ ನಾವು ಕೂಡ ನಿರಂತರವಾಗಿ update ಆಗುತ್ತಿರಬೇಕು. ಅದಕ್ಕೆ ಇಂತಹ ಸಂಸ್ಥೆಗಳ support ನಮಗೆ ಬೇಕು. ಕೊನೆಯಲ್ಲಿ, ಇಂದು ಗೌರವಿಸಲ್ಪಟ್ಟ ಶಿಕ್ಷಕರಿಗೆ ನೀಡಿದ ಗೌರವ ಅಲ್ಲಿಗೆ ನಿಲ್ಲಬಾರದು, ಇದು ಮುಂದೆ ಇನ್ನೂ ಹೆಚ್ಚಿನ ಸೇವೆ ಮಾಡಲು, ವಿದ್ಯಾರ್ಥಿಗಳಲ್ಲಿ ಹೆಚ್ಚಿನ ಕಲಿಕೆ ಮೂಡಿಸಲು ಒಂದು ಆಯುಧವಾಗಬೇಕು, ನಿಮ್ಮನ್ನು ನೀವು ಕೆಳಗೆ ಇಳಿಯದಂತೆ ನೋಡಿಕೊಳ್ಳಲು ಒಂದು ಅಸ್ತ್ರವಾಗಬೇಕು ಎಂದು ಹೇಳಿ ತಮ್ಮ ಮಾತು ಮುಗಿಸಿದರು.

## ಭಾರತ ರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜನ್ಮದಿನಾಚರಣೆ

**ಬೆಂಗಳೂರು:** ಶ್ರೀರಂಗ ಪದವಿಪೂರ್ವ ಕಾಲೇಜು, ಟಿ. ದಾಸರಹಳ್ಳಿ ವತಿಯಿಂದ ಭಾರತ ರತ್ನ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನಾಚರಣೆಯ ಅಂಗವಾಗಿ ಶಿಕ್ಷಕರ ದಿನಾಚರಣೆ ಹಾಗೂ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ವಿಜೃಂಭಣೆಯಿಂದ ಹಾಗೂ ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು.



ಕಾರ್ಯಕ್ರಮಕ್ಕೆ ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ಹನುಮಂತನಾಥ ಮಹಾಸ್ವಾಮಿಗಳ ದಿವ್ಯ ಸಾನಿಧ್ಯವಿತ್ತು. ಹಿರಿಯ ಚಲನಚಿತ್ರ ನಟರಾದ ಶ್ರೀಯುತ ದೊಡ್ಡಣ್ಣ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ, ಶಿಕ್ಷಕರು ವಿದ್ಯಾರ್ಥಿಗಳ ಜೀವನವನ್ನು ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಶಿಕ್ಷಕರು ಕೇವಲ ಜ್ಞಾನವನ್ನು ನೀಡುವವರಲ್ಲ, ಉತ್ತಮ ಮೌಲ್ಯಗಳು ಹಾಗೂ ಸಂಸ್ಕಾರಗಳನ್ನು ಬೆಳೆಸುವ ಮಾರ್ಗದರ್ಶಕರಾಗಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆಶೀರ್ವಚನ ನೀಡಿದ ಪರಮಪೂಜ್ಯ ಡಾ. ಶ್ರೀ ಶ್ರೀ ಶ್ರೀ ಹನುಮಂತನಾಥ ಮಹಾಸ್ವಾಮಿಗಳು, ಶಿಕ್ಷಣದ ಜೊತೆಗೆ ವಿದ್ಯಾರ್ಥಿಗಳಲ್ಲಿ ಸಂಸ್ಕಾರ, ಮಾನವೀಯತೆ ಹಾಗೂ ನೈತಿಕ ಮೌಲ್ಯಗಳನ್ನು ಬೆಳೆಸುವಲ್ಲಿ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಆಶೀರ್ವದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಯುತ ಆಕಾಶ್ ಆರ್. ಗೌಡ ವಹಿಸಿದ್ದರು. ಶ್ರೀಯುತ ರಮೇಶ್ ಕೆ., ಸಂಸ್ಥಾಪಕರು, ಶ್ರೀಮತಿ ಬಿಂದು ರಮೇಶ್ ಕೆ., ಅಧ್ಯಕ್ಷರು ಹಾಗೂ ಶ್ರೀಯುತ ಡಾ. ಗೋಪಾಲಕೃಷ್ಣ ಹೆಬ್ಬಾರ್, ಪ್ರಾಂಶುಪಾಲರು ಹಾಗೂ ಕಾಲೇಜಿನ ಸಿಬ್ಬಂದಿ ಶ್ರೀರಂಗ ಪದವಿಪೂರ್ವ ಕಾಲೇಜು ಅವರು ಉಪಸ್ಥಿತರಿದ್ದರು.

ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀಯುತ ಪಾಲಾಕ್ಷ ಟಿ. ಅವರ ಪರವಾಗಿ ಅವರ ಧರ್ಮಪತ್ನಿ ಶ್ರೀಮತಿ ವಿದ್ಯಾ ಪುಟ್ಟಣ್ಣ ಅವರು ಕಾರ್ಯಕ್ರಮಕ್ಕೆ ಆಗಮಿಸಿ ಉಪಸ್ಥಿತರಿದ್ದರು. ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯರಾದ ಶ್ರೀಯುತ ಪುಟ್ಟಣ್ಣ ಅವರ ಪರವಾಗಿ ಅವರ ಧರ್ಮಪತ್ನಿಯವರು ಸಹ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಅಶ್ವಿನಿ ಗ್ರೂಪ್ ಆಫ್ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀಯುತ ಯುರಾಜ್ ಸರ್ ಅವರು ವಿಶೇಷ ಆಹ್ವಾನಿತರಾಗಿ ಕಾರ್ಯಕ್ರಮಕ್ಕೆ ಆಗಮಿಸಿ ಸಮಾರಂಭದ ಗೌರವವನ್ನು ಹೆಚ್ಚಿಸಿದರು.

ಕಾರ್ಯಕ್ರಮದಲ್ಲಿ ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಅವರ ಅಮೂಲ್ಯ ಸೇವೆಯನ್ನು ಗೌರವಿಸಲಾಯಿತು. ಶಿಕ್ಷಕರ ಸೇವೆ ಮತ್ತು ಸಮರ್ಪಣೆಯನ್ನು ಸ್ಮರಿಸಿ, ಶಿಕ್ಷಣ ಕ್ಷೇತ್ರದಲ್ಲಿ ಅವರು ಸಲ್ಲಿಸುತ್ತಿರುವ ಕೊಡುಗೆಗೆ ಗಣ್ಯರು ಅಭಿನಂದನೆ ಸಲ್ಲಿಸಿದರು.

ಸಮಾರಂಭದಲ್ಲಿ ಆಗಮಿಸಿದ ಗಣ್ಯರು, ಶಿಕ್ಷಕರು ಹಾಗೂ ಆಹ್ವಾನಿತ ಅತಿಥಿಗಳ ಉಪಸ್ಥಿತಿಯಿಂದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ಗೋವಿಂದ ಕಾರಜೋಳ ಎರಡು ದಿನಗಳ ಪ್ರವಾಸ: ಕಾಮಗಾರಿಗಳ ಲೋಕಾರ್ಪಣೆ, ಪರಿಶೀಲನೆ

ಪಾವಗಡ: ಮಾಜಿ ಉಪ ಮುಖ್ಯಮಂತ್ರಿಗಳು ಹಾಗೂ ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಸಂಸದರಾದ ಗೋವಿಂದ ಎಂ. ಕಾರಜೋಳ ಅವರು ಸೆಪ್ಟೆಂಬರ್ 22 ಮತ್ತು 23 ರಂದು ಪಾವಗಡ ತಾಲ್ಲೂಕಿನಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿದ್ದು,



ತಾಲ್ಲೂಕಿನಾದ್ಯಂತ ವಿವಿಧ ಅಭಿವೃದ್ಧಿ ಕಾಮಗಾರಿಗಳ ಲೋಕಾರ್ಪಣೆ, ಶಂಕುಸ್ಥಾಪನೆ ಹಾಗೂ ಪರಿಶೀಲನೆ ನಡೆಸಲಿದ್ದಾರೆ ಎಂದು ಸಂಸದರ ಕಚೇರಿ ಮೂಲಗಳು ತಿಳಿಸಿವೆ.

ಮಂಗಳವಾರ ಪ್ರವಾಸ ಆರಂಭಿಸಿದ ಸಂಸದರು, ವೈ.ಎನ್. ಹೊಸಕೋಟೆಯಲ್ಲಿ ಜಲ ಜೀವನ್ ಮಿಷನ್ ಕಾಮಗಾರಿಗಳನ್ನು ವೀಕ್ಷಣೆ ಮಾಡಿದರು. ನಂತರ ಬಲ್ಲೇನಹಳ್ಳಿ, ಬಿ. ಹೊಸಹಳ್ಳಿ, ಅರೇಕ್ಯಾತನಹಳ್ಳಿ ಹಾಗೂ ಬೆಳ್ಳಿಬಟ್ಟು ಗ್ರಾಮಗಳಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಮುದಾಯ ಭವನಗಳನ್ನು ಸಾರ್ವಜನಿಕರ ಬಳಕೆಗೆ ಲೋಕಾರ್ಪಣೆ ಮಾಡಿದರು. ಇದೇ ವೇಳೆ ಪೇಮ್ಮನಹಳ್ಳಿಯಲ್ಲಿ ನಿರ್ಮಿಸಲಾಗಿರುವ ನೂತನ ಬಸ್ ನಿಲ್ದಾಣವನ್ನು ಉದ್ಘಾಟಿಸಿದರು.

ಬುಧವಾರ ಶ್ರೀ ಯೋಗಿನಾರಾಯಣಸ್ವಾಮಿ ದೇವಸ್ಥಾನದ ಆವರಣದ ಸಮುದಾಯ ಭವನ ಹಾಗೂ ಕಡಮಲಕುಂಟೆ ಗ್ರಾಮದ ಸಮುದಾಯ ಭವನಗಳನ್ನು ಉದ್ಘಾಟಿಸಲಿದ್ದಾರೆ. ತದನಂತರ ರಾಜವಂತಿಯಲ್ಲಿ ನೂತನವಾಗಿ ನಿರ್ಮಾಣವಾಗಲಿರುವ ಭವನಕ್ಕೆ ಭೂಮಿಪೂಜೆ ನೆರವೇರಿಸಲಿದ್ದು, ಪ್ರಸ್ತುತ ನಡೆಯುತ್ತಿರುವ ರೈಲ್ವೆ ಕಾಮಗಾರಿಗಳ ಪ್ರಗತಿಯನ್ನು ವೀಕ್ಷಿಸಿ ಪರಿಶೀಲಿಸಲಿದ್ದಾರೆ. ಪ್ರವಾಸದ ಕೊನೆಯಲ್ಲಿ ತಾಳೆಮರದಹಳ್ಳಿಯಲ್ಲಿ ನಡೆಯಲಿರುವ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಲಿದ್ದಾರೆ.

ಈ ಪ್ರವಾಸದ ಸಂದರ್ಭದಲ್ಲಿ ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಪಕ್ಷದ ಪ್ರಮುಖ ಮುಖಂಡರು ಸಂಸದರೊಂದಿಗೆ ಉಪಸ್ಥಿತರಿರಲಿದ್ದಾರೆ.

# ಸರ್ಕಾರಿ ಅಧಿಕಾರಿಗೆ ಧರ್ಮ ಮಾಡಿ ಎಂಬ ತಮ್ಮ ಹೇಳಿಕೆಗೆ ಸಚಿವ ಶಿವಲಿಂಗೇಗೌಡ ಸ್ಪಷ್ಟನೆ

**ಬೆಂಗಳೂರು:** ನನ್ನದು ಗ್ರಾಮೀಣ ಭಾಷೆ. ಆಡುಭಾಷೆಯಲ್ಲಿ ಮಾತನಾಡುವ ಸಂದರ್ಭದಲ್ಲಿ ಪದ ಬಳಕೆಯ ವ್ಯತ್ಯಾಸವಾಗಿರಬಹುದು. ಗೌರವ ಕೊಡಿ ಎಂದಿದ್ದು ಲಂಚ ಕೊಡಿ ಎಂಬರ್ಥದಲ್ಲಿ ಹೇಳಿಲ್ಲ. ಒಂದು ಪದ ವ್ಯತ್ಯಾಸವಾಗಿದ್ದನ್ನೇ ದೊಡ್ಡ ಸಮಸ್ಯೆಯನ್ನಾಗಿ ಬಿಂಬಿಸಬಾರದು ಎಂದು ಅಬಕಾರಿ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ. ಎಂ. ಶಿವಲಿಂಗೇಗೌಡ ಅವರು ಸ್ಪಷ್ಟಪಡಿಸಿದರು.

ವಿಕಾಸಸೌಧದ ಸಭಾಂಗಣದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಕೆ. ಎಂ. ಶಿವಲಿಂಗೇಗೌಡ ಅವರು ಪದ ವಿವಾದದ ಕುರಿತು ಸಮರ್ಥನೆ ಮಾಡಿಕೊಳ್ಳುತ್ತಿಲ್ಲ. ಉಚ್ಛಾರಣೆಯಲ್ಲಿ ತಪ್ಪಾಗಿದ್ದನ್ನು ಬೆಳೆಸಿಕೊಂಡು ಹೋಗಬಾರದು. ನನ್ನ ವ್ಯಾಖ್ಯಾನದಲ್ಲಿ ಸಹಾಯ ಮಾಡಿದವರಿಗೆ ಧನ್ಯವಾದ ಹೇಳುವುದು ನಮ್ಮ ಧರ್ಮ ಎಂಬುದಾಗಿತ್ತು. ಇದರಿಂದ ಫಲಾನುಭವಿ ಹಾಗೂ ಅಧಿಕಾರಿಗಳ ನಡುವಣ ಸಂಘರ್ಷ ಇತ್ಯರ್ಥಗೊಳ್ಳುತ್ತದೆ ಎಂಬ ಆಶಾಭಾವನೆಯಲ್ಲಿ ನಾನು ಹಾಗೆ ಹೇಳಿದ್ದಾಗಿತ್ತು ಎಂದರು.

ಹಾಸನದಲ್ಲಿ ಡ್ಯಾಶ್ ಬೋರ್ಡ್ ಸ್ಥಾಪನೆ:

ರಾಜ್ಯದಲ್ಲೇ ಮೊದಲ ಬಾರಿಗೆ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಹಾಸನದಲ್ಲಿ ಕುಂದುಕೊರತೆಗಳ ಪರಿಹಾರ ಪ್ರಕ್ರಿಯೆಗೆ ಸಂಬಂಧಿಸಿದ ಡ್ಯಾಶ್ ಬೋರ್ಡ್ ಅನ್ನು ಸ್ಥಾಪಿಸಲಾಗುವುದು. ಅದರಲ್ಲಿ ದಾಖಲಾದ ಜನರ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಅಧಿಕಾರಿಗಳು ತೆಗೆದುಕೊಂಡ ಸಮಯಾವಕಾಶ ಮತ್ತು ಅದು ಯಾವ ಹಂತದಲ್ಲಿದೆ ಎಂಬ ವಿವರಗಳು ಅದರಲ್ಲಿ ಲಭ್ಯವಿರಲಿದೆ ಎಂದು ಮಾಹಿತಿ ನೀಡಿದರು.

ಲಂಚ ತೆಗೆದುಕೊಂಡ ಅಧಿಕಾರಿಗಳ ವಿರುದ್ಧ ಕ್ರಮ:

ಸಕಲೇಶಪುರ ತಾಲ್ಲೂಕಿನಲ್ಲಿ ನಡೆದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಕೆಲವು ಅಧಿಕಾರಿಗಳು ಲಂಚ ಸ್ವೀಕರಿಸಿರುವುದಾಗಿ ಸ್ಥಳೀಯರು ದೂರಿದ್ದಾರೆ. ಅಂತಹ ಆರೋಪ ಹೊತ್ತಿರುವ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ, ಎರಡು ತಿಂಗಳಲ್ಲಿ ಕ್ರಮ ವಹಿಸಲಾಗುವುದು ಎಂದು ಶಿವಲಿಂಗೇಗೌಡ ಅವರು ಸ್ಪಷ್ಟಪಡಿಸಿದರು.

ಸಕಲೇಶಪುರದಲ್ಲಿ ಬೆಳಗ್ಗೆ 10 ಗಂಟೆಯಿಂದ ರಾತ್ರಿ 8 ಗಂಟೆ ವರೆಗೆ ಬಿಡುವಿಲ್ಲದೆ ನಿರಂತರವಾಗಿ ಸ್ಥಳೀಯರ ಸಮಸ್ಯೆಗಳನ್ನು ಆಲಿಸಿದ್ದೇನೆ. ಒಂದು ಬದಿಯಲ್ಲಿ ಸಮಸ್ಯೆ ತಂದವರನ್ನು, ಮತ್ತೊಂದು ಬದಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನಿಲ್ಲಿಸಿಕೊಂಡು ಇಬ್ಬರ ವಾದಗಳನ್ನು ಆಲಿಸಿದ್ದೇನೆ. ಸರ್ಕಾರದ ಯೋಜನೆ ಫಲಾನುಭವಿಗೆ ಸರಿಯಾಗಿ ತಲುಪುವ ನಿಟ್ಟಿನಲ್ಲಿ ಸಲಹೆಗಳನ್ನು ನೀಡಿದ್ದೇನೆ. ಎಷ್ಟು ದಿನಗಳಲ್ಲಿ ಸಮಸ್ಯೆ ಬಗೆಹರಿಸಿಕೊಡುತ್ತೀರಿ ಎಂಬುದನ್ನು ಅಧಿಕಾರಿಗಳನ್ನು ಸ್ಥಳದಲ್ಲಿಯೇ ಕೇಳಿ, ನಿಗದಿತ ಸಮಯವನ್ನು ದಾಖಲಿಸಿಕೊಂಡಿದ್ದೇನೆ. ನಿಗದಿತ ಸಮಯದಲ್ಲಿ ಇತ್ಯರ್ಥ ಪಡಿಸಿಕೊಡದಿದ್ದರೆ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದ್ದೇನೆ. ಹೀಗೆ ಸುಮಾರು 400ಕ್ಕೂ ಹೆಚ್ಚು ಮಂದಿಯ ಕುಂದುಕೊರತೆಗಳನ್ನು ಖುದ್ದಾಗಿ ಆಲಿಸಿ, ಬಗೆಹರಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದ್ದೇನೆ. ಸ್ಥಳೀಯರಿಂದ ಭಾರಿ ಮುಚ್ಚುಗೆ ವ್ಯಕ್ತವಾಗಿದೆ. ಆದರೆ ವಿರೋಧ ಪಕ್ಷಗಳ ಕೆಲವರು ನನ್ನ ಒಂದು ಪದ ಬಳಕೆಯನ್ನೇ ಪ್ರಧಾನವಾಗಿಸಿ ನನ್ನ ಶ್ರಮವನ್ನೇ ಹಾಳುಗೆಡವಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಸ್ವಕ್ಷೇತ್ರ ಅರಸೀಕೆರೆಯಲ್ಲಿ ಸ್ಥಳೀಯರ ಕುಂದುಕೊರತೆಗಳನ್ನು ಆಲಿಸಿ, ಬಗೆಹರಿಸುವ ಕೆಲಸವನ್ನು ಮೊದಲಿನಿಂದಲೂ ಮಾಡುತ್ತಾ ಬಂದಿದ್ದೇನೆ. ಅದೇ ಮಾದರಿಯಲ್ಲಿ ಹಾಸನದ ಉಸ್ತುವಾರಿ ಸಚಿವರಾದ ಮೇಲೆ ಮೊದಲ ಬಾರಿಗೆ ಸಕಲೇಶಪುರದಲ್ಲೂ ನಡೆಸಿದೆ. ಕಾರ್ಯಕ್ರಮ ಯಶಸ್ವಿಯಾದ ತೃಪ್ತಿ ನನಗಿದೆ. ಆದರೆ ಒಂದು ಪದ ಬಳಕೆಯನ್ನು ವಿವಾದಕ್ಕೆ ಬಳಸಲಾಯಿತಲ್ಲ ಎಂಬ ವ್ಯಥೆಯೂ ಇದೆ. ಹೃದಯದ ಭಾರವನ್ನು ಇಳಿಸಿಕೊಳ್ಳಲು ಈ ಮಾತುಗಳನ್ನು ಹೇಳುತ್ತಿದ್ದೇನೆ. ನನ್ನ ರಾಜಕೀಯ ಜೀವನದಲ್ಲಿ ಒಂದೇ ಒಂದು ಕಪ್ಪು ಚುಕ್ಕಿಯಿಲ್ಲ, ಅತ್ಯಂತ ಪ್ರಾಮಾಣಿಕವಾಗಿ ನಡೆದುಕೊಂಡು ಬಂದಿದ್ದೇನೆ ಎಂದು ಒತ್ತಿ ಹೇಳಿದರು.

## ಮಧುಗಿರಿ ತಾಲ್ಲೂಕು: ದೀಕ್ಷಾ ಭೂಮಿ ಯಾತ್ರೆಗಾಗಿ ಆನ್‌ಲೈನ್ ಅರ್ಜಿ ಆಹ್ವಾನ

**ತುಮಕೂರು:** ಮಹಾರಾಷ್ಟ್ರದ ನಾಗಪುರದಲ್ಲಿ ನಡೆಯಲಿರುವ ದೀಕ್ಷಾ ಭೂಮಿ ಯಾತ್ರೆಯನ್ನು ಕೈಗೊಳ್ಳಲಿಚ್ಛಿಸುವ ಡಾ: ಬಿ.ಆರ್. ಅಂಬೇಡ್ಕರ್ ಅವರ ಅನುಯಾಯಿಗಳಿಂದ ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ಮಧುಗಿರಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ(ಗ್ರೇಡ್-1) ಡಾ: ದಿನೇಶ್ ಬಿ.ಎಂ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ: ಬಿ.ಆರ್. ಅಂಬೇಡ್ಕರ್ ಅನುಯಾಯಿಗಳನ್ನು ಅಕ್ಟೋಬರ್ 19 ರಿಂದ 22ರವರೆಗೆ ದೀಕ್ಷಾ

ಭೂಮಿ ಯಾತ್ರೆಗೆ ಕಳುಹಿಸಿಕೊಡಲು ಬಸ್/ರೈಲಿನ ವ್ಯವಸ್ಥೆ ಕಲ್ಪಿಸುವ ಸಂಬಂಧ ಅರ್ಹ ಯಾತ್ರಾರ್ಥಿಗಳನ್ನು ಆಯ್ಕೆ ಮಾಡಲು ಈ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಡಾ: ಬಿ.ಆರ್. ಅಂಬೇಡ್ಕರ್ ಅನುಯಾಯಿಗಳು ಸಮಾಜ ಕಲ್ಯಾಣ ಇಲಾಖೆಯ ವೆಬ್‌ಸೈಟ್ https://swd.karnataka.gov.in/ ಮೂಲಕ ಅಕ್ಟೋಬರ್ 9ರೊಳಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮಧುಗಿರಿ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಅಥವಾ ದೂ.ವಾ.ಸಂ. 08137-200579ನ್ನು ಸಂಪರ್ಕಿಸಬೇಕೆಂದು ಅವರು ತಿಳಿಸಿದ್ದಾರೆ.

# ಕುಡಿಯುವ ನೀರಿಗೆ ಪರ್ಯಾಯ ಮೂಲಗಳನ್ನು ಗುರುತಿಸಲು ಡೀಸಿ ಶುಭ ಕಲ್ಯಾಣ್ ಸೂಚನೆ



**ತುಮಕೂರು:** ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಪ್ರದೇಶಗಳಲ್ಲಿ ಪರ್ಯಾಯ ನೀರಿನ ಮೂಲಗಳನ್ನು ಗುರುತಿಸಿ, ಅಗತ್ಯವಿರುವ ಕಡೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಕೇಸ್ವಾನ್ ಸಭಾಂಗಣದಲ್ಲಿ ಸೋಮವಾರ ಸಂಜೆ ವಿಡಿಯೋ ಕಾನ್ಫರೆನ್ಸ್ ಮೂಲಕ ಜರುಗಿದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಅಂಕ ಯೋಜನೆಯಡಿ ಕೊರೆಯಲಾದ ವಿಫಲ ಬೋರ್‌ವೆಲ್‌ಗಳ ಕುರಿತು ಸುದೀರ್ಘವಾಗಿ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಜಿಲ್ಲೆಯ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿನ ಪ್ರಸ್ತುತ ಕುಡಿಯುವ ನೀರಿನ ಸರಬರಾಜಿನ ಸ್ಥಿತಿ-ಗತಿ ಕುರಿತು ಅಧಿಕಾರಿಗಳಿಂದ ತಾಲೂಕುವಾರು ಮಾಹಿತಿ ಪಡೆದು ಪರಿಶೀಲಿಸಿದರು. ತಾಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ವಿಫಲ ಬೋರ್‌ವೆಲ್‌ಗಳ ಸ್ಥಳ ಪರಿಶೀಲನೆ ನಡೆಸಿ, ಉಕಖ ಛಾಯಾಚಿತ್ರಗಳೊಂದಿಗೆ ಸಮಗ್ರ ತಾಂತ್ರಿಕ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಿದರು. ತಾಂತ್ರಿಕವಾಗಿ ಸಾಧ್ಯವಿರುವ ಕಡೆಗಳಲ್ಲಿ ಬೋರ್‌ವೆಲ್ ಪುನಶ್ಚೇತನ ಅಥವಾ ಅಗತ್ಯವಿದ್ದಲ್ಲಿ ಆಳಗೊಳಿಸುವ ಕುರಿತು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ತಾಂತ್ರಿಕವಾಗಿ ಪುನಶ್ಚೇತನಗೊಳಿಸಲು ಸಾಧ್ಯವಾಗದ ಬೋರ್‌ವೆಲ್‌ಗಳಿದ್ದಲ್ಲಿ ಪರ್ಯಾಯ ಸ್ಥಳ ಗುರುತಿಸಿ ಹೊಸ ಬೋರ್‌ವೆಲ್ ಕೊರೆಯಲು ಅಗತ್ಯ ಪ್ರಸ್ತಾವನೆ ಸಲ್ಲಿಸಬೇಕೆಂದು ನಿರ್ದೇಶನ ನೀಡಿದರು.

ವಿಫಲ ಬೋರ್‌ವೆಲ್‌ಗಳಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ, ಅಗತ್ಯವಿರುವ ಪ್ರದೇಶಗಳಲ್ಲಿ ತಕ್ಷಣವೇ ಪರ್ಯಾಯ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಿದರು. ಅಲ್ಲದೆ, ವಿಫಲ ಬೋರ್‌ವೆಲ್‌ಗಳ ಸುರಕ್ಷಿತ ಮುಚ್ಚುವಿಕೆ, ಸ್ಥಳದ ದಾಖಲೀಕರಣ ಹಾಗೂ ಕೈಗೊಂಡ ಕ್ರಮಗಳ ವರದಿಯನ್ನು ಉಕಖ ಛಾಯಾಚಿತ್ರದೊಂದಿಗೆ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಮೇವಿನ ಲಭ್ಯತೆ ಪರಿಶೀಲನೆ:** ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಮೇವಿನ ಲಭ್ಯತೆ ಮತ್ತು ಬೇಡಿಕೆ ಕುರಿತು ಮಾಹಿತಿ ಪಡೆದ ಅವರು, ಜಾನುವಾರುಗಳಿಗೆ ಅಗತ್ಯ ಪ್ರಮಾಣದಲ್ಲಿ ಮೇವು ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಯಾವುದೇ ಪ್ರದೇಶದಲ್ಲಿ ಮೇವು ಕೊರತೆ ಉಂಟಾಗದಂತೆ ತಾಲೂಕು ಮಟ್ಟದಲ್ಲಿ ನಿರಂತರ ಮೇಲ್ವಿಚಾರಣೆ ನಡೆಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಮಿನಿ ಕಿಟ್ ಹಾಗೂ ಬಿತ್ತನೆ ಪ್ರಗತಿ:** ಸಭೆಯಲ್ಲಿ ಮಿನಿ ಕಿಟ್‌ಗಳ ವಿತರಣೆ ಹಾಗೂ ಬಿತ್ತನೆ ಪ್ರಗತಿ ಕುರಿತು ಸಹ ಪರಿಶೀಲನೆ ನಡೆಸಲಾಯಿತು. ಬಾಕಿ ಇರುವ ಮಿನಿ ಕಿಟ್‌ಗಳ ವಿತರಣೆ ಮತ್ತು ಬಿತ್ತನೆ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಿ, ಅರ್ಹ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯ ಸಮರ್ಪಕವಾಗಿ ತಲುಪುವಂತೆ ಸೂಚಿಸಿದರು.

**ಬೆಳೆ ನಷ್ಟದ ಪರಿಶೀಲನೆ:** ಜಿಲ್ಲೆಯ ವಿವಿಧ ತಾಲೂಕುಗಳ ಬೆಳೆ ನಷ್ಟದ ತಾಲೂಕುವಾರು ವರದಿಯನ್ನು ಪರಿಶೀಲಿಸಿದ ಜಿಲ್ಲಾಧಿಕಾರಿಗಳು, ಬೆಳೆ ಹಾನಿಯ ವಾಸ್ತವಿಕ ಸ್ಥಿತಿಯನ್ನು ಕ್ಷೇತ್ರಮಟ್ಟದಲ್ಲಿ ಪರಿಶೀಲಿಸಬೇಕು. ಬೆಳೆ ಹಾನಿಗೆ ಸಂಬಂಧಿಸಿದ ಅಗತ್ಯ ದಾಖಲೆ ಹಾಗೂ ವರದಿಗಳನ್ನು ನಿಯಮಾನುಸಾರ ಮತ್ತು ಸಮರ್ಪಕವಾಗಿ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಎಲ್ಲಾ ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ವಾಟರ್ ಮನ್‌ಗಳು ತಮ್ಮ ವ್ಯಾಪ್ತಿಯಲ್ಲಿ ಕುಡಿಯುವ ನೀರು, ಮೇವು ಹಾಗೂ ಇತರೆ ಮೂಲಭೂತ ಸೌಲಭ್ಯಗಳ ಕುರಿತು ನಿರಂತರ ನಿಗಾ ವಹಿಸಬೇಕು. ಇದೇ ಶುಕ್ರವಾರ ಎಲ್ಲಾ ತಾಲೂಕುಗಳಲ್ಲಿ ಮತ್ತು ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗ್ರಾಮಸಭೆಯನ್ನು ಏರ್ಪಡಿಸಲು ನಿರ್ದೇಶನ ನೀಡಿದರು. ಸಾರ್ವಜನಿಕರಿಂದ ಬರುವ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಕ್ಷೇತ್ರಮಟ್ಟದಲ್ಲಿ ಪರಿಣಾಮಕಾರಿ ಸಮನ್ವಯದೊಂದಿಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಯಾವುದೇ ಗಂಭೀರ ಸಮಸ್ಯೆ ಅಥವಾ ತುರ್ತು ಪರಿಸ್ಥಿತಿ ಕಂಡುಬಂದಲ್ಲಿ ತಕ್ಷಣವೇ ಮೇಲಾಧಿಕಾರಿಗಳ ಗಮನಕ್ಕೆ ತಂದು, ವಿಳಂಬವಿಲ್ಲದೆ ಪರಿಹಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ ಮಾತನಾಡಿ, ತಾಲೂಕು ಮಟ್ಟದ ಸಹಾಯವಾಣಿಗಳ ಕುರಿತು ವ್ಯಾಪಕ ಪ್ರಚಾರ ಮಾಡಬೇಕು ಮತ್ತು ಸಹಾಯವಾಣಿ ಮೂಲಕ ಸ್ವೀಕರಿಸಲಾಗುತ್ತಿರುವ ಕರೆ ಹಾಗೂ ಸಾರ್ವಜನಿಕರಿಂದ ಬಂದಿರುವ ಕುಡಿಯುವ ನೀರಿಗೆ ಸಂಬಂಧಿಸಿದ ಸಮಸ್ಯೆಗಳ ಕುರಿತು ಮಾಹಿತಿ ಪಡೆದು, ಸಮಸ್ಯಾತ್ಮಕ ಗ್ರಾಮಗಳಲ್ಲಿ ಸಮರ್ಪಕ ಕುಡಿಯುವ ನೀರು ಸರಬರಾಜು ಮಾಡುವಂತೆ ಸೂಚಿಸಿದರು. ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿರುವ ಗ್ರಾಮಗಳ ವಿವರ ಹಾಗೂ ಕೈಗೊಳ್ಳಲಾಗುತ್ತಿರುವ ಕ್ರಮಗಳ ಕುರಿತು ಪರಿಶೀಲಿಸಿದರು. ಅಲ್ಲದೆ, ಈಗಾಗಲೇ ನೀರು ಸರಬರಾಜು ಮಾಡಿರುವ ಟ್ಯಾಂಕರ್‌ಗಳ ಬಿಲ್‌ಗಳ ಹಣ ಪಾವತಿ ಪ್ರಕ್ರಿಯೆಯ ಬಗ್ಗೆ ಮತ್ತು ಬರಗಾಲ ಘೋಷಣೆಯ ಹಿನ್ನೆಲೆಯಲ್ಲಿ ಸರ್ಕಾರದ ಆದೇಶ ಹಾಗೂ ನಿಯಮಾನುಸಾರ ಬಾಕಿ ಇರುವ ಟ್ಯಾಂಕರ್‌ಗಳ ಹಣವನ್ನು ತ್ವರಿತವಾಗಿ ಪಾವತಿಸುವಂತೆ ತಹಶೀಲ್ದಾರ್‌ಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ವಾಸುದೇವ್ ಬಿ.ಎಚ್. ಪಶುಪಾಲನ ಮತ್ತು ಪಶುವೈದ್ಯ ಸೇವಾ ಇಲಾಖೆ ಉಪನಿರ್ದೇಶಕರು ಶಿವಪ್ರಸಾದ್ ಎಚ್.ಎಂ. ಜಂಟಿ ಕೃಷಿ ನಿರ್ದೇಶಕ ಲಕ್ಷ್ಮಣ್ ಎಸ್. ಕಳ್ಳಣ್ಣನವರ್, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

## ಸೆ.26ರಂದು ಊರ್ಡಿಗೆರೆ ಗ್ರಾಮದಲ್ಲಿ 'ಪ್ರಜಾ ಸೇವಾ ಆಂದೋಲನ'

**ತುಮಕೂರು:** ತಾಲ್ಲೂಕಿನ ಊರ್ಡಿಗೆರೆ ಗ್ರಾಮದ ಸೆಂಟ್ರಲ್ ಸ್ಕೂಲ್ ಆವರಣದಲ್ಲಿ ಸೆಪ್ಟೆಂಬರ್ 26ರಂದು ಶನಿವಾರ ಬೆಳಗ್ಗೆ 10 ಗಂಟೆಗೆ ಸಾರ್ವಜನಿಕರ ಕುಂದು-ಕೊರತೆಗಳನ್ನು ಆಲಿಸಿ ಸ್ಥಳದಲ್ಲಿಯೇ ಪರಿಹಾರ ಒದಗಿಸುವ ಉದ್ದೇಶದಿಂದ 'ಪ್ರಜಾ ಸೇವಾ ಆಂದೋಲನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಹಶೀಲ್ದಾರ್ ರಾಜೇಶ್ವರಿ ತಿಳಿಸಿದ್ದಾರೆ.

ಕಾರ್ಯಕ್ರಮವು ಶಾಸಕ ಬಿ. ಸುರೇಶ್ ಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ವಿವಿಧ ಇಲಾಖಾಧಿಕಾರಿಗಳು ಭಾಗವಹಿಸಿ, ಸರ್ಕಾರಿ ಯೋಜನೆ ಹಾಗೂ ಸೌಲಭ್ಯಗಳ ಕುರಿತು ಮಾಹಿತಿ ನೀಡಲಿದ್ದಾರೆ. ಸಾರ್ವಜನಿಕರಿಂದ ಸ್ವೀಕರಿಸುವ ಅಹವಾಲು ಅರ್ಜಿ/ಕುಂದು-ಕೊರತೆಗಳನ್ನು ಐಕಉಖಖ ಪೋರ್ಟಲ್‌ನಲ್ಲಿ ಸ್ಥಳದಲ್ಲಿಯೇ ನೋಂದಾಯಿಸಿ ಸ್ವೀಕೃತಿ ನೀಡಲಾಗುವುದು. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕೋರಿದ್ದಾರೆ.

## ದಸರಾ ಉತ್ಸವ: ಆಹಾರ ಮಳಿಗೆಗಾಗಿ ಅರ್ಜಿ ಆಹ್ವಾನ

**ತುಮಕೂರು:** ಜಿಲ್ಲಾಡಳಿತದ ವತಿಯಿಂದ ತುಮಕೂರು ದಸರಾ ಉತ್ಸವದ ಪ್ರಯುಕ್ತ ನಗರದ ಸರ್ಕಾರಿ ಜ್ಯೂನಿಯರ್ ಕಾಲೇಜು ಮೈದಾನದಲ್ಲಿ ಅಕ್ಟೋಬರ್ 17 ರಿಂದ 21ರವರೆಗೆ "ಆಹಾರ ಮೇಳ"ವನ್ನು ಆಯೋಜಿಸಲಾಗಿದ್ದು, ಈ ಆಹಾರ ಮೇಳದಲ್ಲಿ ಮಳಿಗೆಯನ್ನು ತೆರೆಯಲಿಚ್ಛಿಸುವವರಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿಯನ್ನು ಜಂಟಿ ನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿ, ಆಹಾರ ಮೇಳ ಉಪ ಸಮಿತಿ, ತುಮಕೂರು ದಸರಾ ಮಹೋತ್ಸವ, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ಕಾರ್ಯಾಲಯ, ಕೊ.ಸಂಖ್ಯೆ: 205, 2ನೇ ಮಹಡಿ, ಜಿಲ್ಲಾಧಿಕಾರಿಗಳ ಕಚೇರಿ, ತುಮಕೂರು ಇವರ ಕಚೇರಿಯಲ್ಲಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಅಕ್ಟೋಬರ್ 5ರೊಳಗೆ ಸಲ್ಲಿಸತಕ್ಕದ್ದು.

ಹೆಚ್ಚಿನ ಮಾಹಿತಿಗಾಗಿ ಇ-ಮೇಲ್ ddfoodtumkur@gmail.com ಅಥವಾ ddfcs.tmkr-ka@nic.in ಅಥವಾ ದೂ.ವಾ.0816-2278348ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಹೇಮಾವತಿ ಲಿಂಕ್ ಕೆನಾಲ್ ಕಾಮಗಾರಿ ನಿಲ್ಲಲು ಯುವಶಕ್ತಿ ಕಾರಣ: ಬಿ.ಎಸ್.ನಾಗರಾಜು



**ಗುಬ್ಬಿ:** ತಾಲ್ಲೂಕಿನ ರೈತರ ಜೀವನಾಡಿಯಾದ ಹೇಮಾವತಿ ನೀರು ಮತ್ತೊಂದ್ ಜಿಲ್ಲೆಯತ್ತ ಹರಿಸಿಕೊಳ್ಳುವ ಲಿಂಕ್ ಕೆನಾಲ್ ಪೈಪ್ ಲೈನ್ ಕಾಮಗಾರಿ ಬೃಹತ್ ಹೋರಾಟದ ಮೂಲಕ ಸ್ಥಗಿತ ಮಾಡಲಾಗಿದೆ. ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಯುವಶಕ್ತಿಯಿಂದ ಈ ಕಾಮಗಾರಿ ನಿಲ್ಲಲು ಕಾರಣ ಎಂದು ಜೆಡಿಎಸ್ ಮುಖಂಡ ಬಿ.ಎಸ್.ನಾಗರಾಜು ತಿಳಿಸಿದರು.

ತಾಲ್ಲೂಕಿನ ಕಸಬ ಹೋಬಳಿ ಜಿ.ಹರಿವೇಸಂದ್ರ ಗ್ರಾಮದಲ್ಲಿ ವಿನಾಯಕ ಗೆಳೆಯರ ಬಳಗ ಆಯೋಜಿಸಿದ್ದ ಗಣೇಶೋತ್ಸವ ಹಾಗೂ ರಸಮಂಜರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಬರಗಾಲದ ಛಾಯೆ ಈಗಾಗಲೇ ತಾಲ್ಲೂಕಿನ ರೈತರನ್ನು ಕಂಗಾಲು ಮಾಡಿದೆ. ಜಿಲ್ಲೆಯಲ್ಲಿ ಅಲ್ಪಸ್ವಲ್ಪ ಹೇಮಾವತಿ ನೀರು ಈ ಬಾರಿ ಹರಿಯಲು ಲಿಂಕ್ ಕೆನಾಲ್ ವಿರೋಧಿ ಹೋರಾಟಗಾರರೇ ಕಾರಣ ಎಂದರು. ಕೃಷಿ ಚಟುವಟಿಕೆ ಸ್ಥಗಿತವಾಗಿದೆ. ಗಣೇಶ ಹಬ್ಬ ಸೇರಿದಂತೆ ಮತ್ತಿತರ ಧಾರ್ಮಿಕ ಕಾರ್ಯಕ್ರಮ ಮಳೆಗಾಗಿ ಪ್ರಾರ್ಥನೆ ಸಲ್ಲಿಸಲು ಮಾಡಬೇಕಿದೆ. ಮುಂಗಾರು ಕೈಕೊಟ್ಟಿದೆ. ಹಿಂಗಾರು ಮಳೆಯಾದರೂ ತಾಲ್ಲೂಕಿಗೆ ಬರಲಿ ಎಂದು ದೇವರಲ್ಲಿ ಪ್ರಾರ್ಥಿಸಿ ಗಣೇಶ ವಿಸರ್ಜನೆ ಎಲ್ಲೆಡೆ ಮಾಡುತ್ತಿದ್ದಾರೆ ಎಂದರು.

ರಾಜಕೀಯ ಮಾಡುವುದು ಚುನಾವಣಾ ಸಮಯದಲ್ಲಿ ಎಂಬುದು ಎಲ್ಲರಿಗೂ ತಿಳಿದಿದೆ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಲ್ಲದ ರಾಜಕಾರಣ ಬೇಕಿಲ್ಲ. ಗ್ರಾಮದಲ್ಲಿ ಯಾವುದೇ ಹಬ್ಬ ಆಚರಿಸಿದರೂ ಜಾತ್ಯತೀತ ಪಕ್ಷಾತೀತ ನಿಲುವು ಇರಬೇಕು. ಎಲ್ಲರೂ ಒಗ್ಗೂಡಿ ಗ್ರಾಮದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಗ್ರಾಪಂ ಮಾಜಿ ಅಧ್ಯಕ್ಷ ದೇವರಾಜ್, ಮಾಜಿ ಸದಸ್ಯ ಚನ್ನಶೆಟ್ಟಿಹಳ್ಳಿ ಯತೀಶ್, ಸಿದ್ದರಾಜು, ರಂಗಸ್ವಾಮಿ, ಜೆಡಿಎಸ್ ಕಸಬ ಹೋಬಳಿ ಅಧ್ಯಕ್ಷ ಕಾಂತರಾಜು, ಮುಖಂಡ ಜಿ.ಎಂಶಿವಾನಂದ ಇನ್ನಿತರರು ಇದ್ದರು.

# ರೈತರು ಇ-ಕೆವೈಸಿ ಮಾಡಿಸುವುದು ಕಡ್ಡಾಯ




**ಮಧುಗಿರಿ:** ಪಿ.ಎಂ. ಕಿಸಾನ್ ಯೋಜನೆಯ ಮುಂದಿನ ಕಂತಿನ ಹಣ ಪಡೆಯಲು ಅರ್ಹ ರೈತರು ಬಯೋಮೆಟ್ರಿಕ್ ಅಥವಾ ಮುಖ ದೃಢೀಕರಣ ಆಧಾರಿತ ಇ-ಕೆವೈಸಿ ಪೂರ್ಣಗೊಳಿಸುವುದು ಕಡ್ಡಾಯವಾಗಿರುತ್ತದೆ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕ ಚೆನ್ನಕೇಶವ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದರು.

ಇ-ಕೆವೈಸಿ ಮಾಡಿಸಿಕೊಳ್ಳಲು ಎರಡು ವಿಧಾನಗಳಲ್ಲಿ ಅವಕಾಶವಿದೆ. ಮೊದಲನೆಯದಾಗಿ ರೈತರು ಬಯೋಮೆಟ್ರಿಕ್ ಅಥವಾ ಮುಖ ದೃಢೀಕರಣದ ಮೂಲಕ ಇ-ಕೆವೈಸಿ ಮಾಡಿಕೊಳ್ಳಬಹುದು. ಬಯೋಮೆಟ್ರಿಕ್ ಆಧಾರಿತ ಇ-ಕೆವೈಸಿ ಯನ್ನು ಸಾಮಾನ್ಯ ಸೇವಾ ಕೇಂದ್ರ (ಸಿ.ಎಸ್.ಸಿ), ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಗ್ರಾಮ ಪಂಚಾಯಿತಿಗಳಲ್ಲಿ ನಿಯೋಜನೆಯಲ್ಲಿರುವ ಕೃಷಿ ಸಖಿಯರು ಇವರಿಂದಲೂ ಹಾಗೂ ಆಯಾಯ ಹೋಬಳಿಗಳಲ್ಲಿ ಇರುವ ರೈತ ಸಂಪರ್ಕ ಕೇಂದ್ರಗಳಲ್ಲಿ ಮಾಡಿಸಿಕೊಳ್ಳಬಹುದು.

ಇ-ಕೆವೈಸಿ ಮಾಡಿಸದೇನ ಇರುವ ಫಲಾನುಭವಿಗಳಿಗೆ ಮುಂದಿನ ಕಂತಿನ ಹಣ ಜಮೆಯಾಗುವಲ್ಲಿ ಅಡಚಣೆಯಾಗುವ ಸಾಧ್ಯತೆಯಿದೆ. ಪಿ.ಎಂ ಕಿಸಾನ್ ಯೋಜನೆಯ 24 ನೇ ಕಂತು ಸೆಪ್ಟೆಂಬರ್ ನಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ. ಈ ಯೋಜನೆಯಡಿ ಪ್ರತಿ ನಾಲ್ಕು ತಿಂಗಳಿಗೊಮ್ಮೆ ರೂ.2,000 ರಂತೆ ವರ್ಷಕ್ಕೆ ಮೂರು ಕಂತುಗಳಲ್ಲಿ ಒಟ್ಟು ರೂ 6,000 ರೈತರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಜಮೆ ಮಾಡಲಾಗುತ್ತದೆ. ಎರಡನೇಯದಾಗಿ, ರೈತರು ಸ್ವತಃ ಮೊಬೈಲ್ ಮೂಲಕವು ಇ-ಕೆವೈಸಿ ಪೂರ್ಣಗೊಳಿಸಬಹುದು. ಇದಕ್ಕಾಗಿ ಗೂಗಲ್ ಪ್ಲೇ ಸ್ಟೋರ್‌ನಿಂದ ಪಿ.ಎಂ. ಕಿಸಾನ್ ಮೊಬೈಲ್ ಆಪ್ ಹಾಗೂ ಆಧಾರ್ ಫೇಸ್ ಆರ್.ಡಿ. ಆಪ್ ಡೌನ್‌ಲೋಡ್ ಮಾಡಿಕೊಂಡು ನೊಂದಾಯಿತ ಮೊಬೈಲ್ ಸಂಖ್ಯೆಯ ಮೂಲಕ ಲಾಗಿನ್ ಮಾಡಬೇಕು. ಬಳಿಕ ಆಧಾರ್ ಸಂಖ್ಯೆ ನಮೂದಿಸಿ ಮುಖ ದೃಢೀಕರಣ ಪೂರ್ಣಗೊಳಿಸಿದರೆ ಇ-ಕೆವೈಸಿ ಪ್ರಕ್ರಿಯೆಯು ಪೂರ್ಣಗೊಳ್ಳುತ್ತದೆ. ಮಧುಗಿರಿ ತಾಲ್ಲೂಕಿನ ಎಲ್ಲಾ ರೈತ ಬಾಂಧವರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಈ ಮೂಲಕ ರೈತರಲ್ಲಿ ಮನವಿ ಮಾಡಿಕೊಳ್ಳಲಾಗಿದೆ ಎಂದರು.

## ಕರಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

# ಸಂಘದ ಅಭಿವೃದ್ಧಿಗೆ ಪ್ರತಿಯೊಬ್ಬ ಸದಸ್ಯರು ಕೈ ಜೋಡಿಸಬೇಕು: ಡಾ.ಅಭಿನವ ಶ್ರೀ



**ತಿಪಟೂರು:** ತಾಲೂಕಿನ ಕಿಬ್ಬನಹಳ್ಳಿ ಹೋಬಳಿಯ ಕರಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತದ 2025-26 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಕಚೇರಿಯ ಸಭಾಂಗಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸದ್ದ ತಮ್ಮಡಿಹಳ್ಳಿ ವಿರಕ್ತಮಠದ ಪೀಠಾಧಿಪತಿಗಳಾದ ಶ್ರೀ ಡಾ. ಅಭಿನವ ಮಲ್ಲಿಕಾರ್ಜುನ ದೇಶಿಕೇಂದ್ರ ಸ್ವಾಮೀಜಿಯವರು ಮಾತನಾಡಿ, ಸಂಘದ ಅಭಿವೃದ್ಧಿಯಲ್ಲಿ ಅಧ್ಯಕ್ಷರ, ಆಡಳಿತ ಮಂಡಳಿಯವರ ಹಾಗೂ ನೌಕರರ ಪಾತ್ರ ಮುಖ್ಯವಾಗಿದ್ದು, ಇವರೊಂದಿಗೆ ಸದಸ್ಯರು ಕೈಜೋಡಿಸಿ ಸಂಘದ ಅಭಿವೃದ್ಧಿಗೆ ಕಾರಣರಾಗಬೇಕು. ದಿನನಿತ್ಯದ ಬದುಕಿಗೆ ಕಟ್ಟ ಕಡೆಯ ವ್ಯಕ್ತಿಗೆ ನೆರವಾಗಲು ಇರುವ ಏಕೈಕ ಸಂಸ್ಥೆ ಎಂದರೆ ಅದುವೇ ಸಹಕಾರಿ. ಕೃಷಿ ಚಟುವಟಿಕೆ ಮತ್ತು ರೈತರ ಜೊತೆ ಸದಾ ಬೆನ್ನೆಲುಬಾಗಿ ನಿಲ್ಲುವ ಈ ಸಹಕಾರಿಯ ಅಧ್ಯಕ್ಷ ದೇವರಾಜು ಈ ಭಾಗದ ನಿಜವಾದ ಸಹಕಾರಿಯ ಸಂಸ್ಥೆಯ ಭಗೀರಥ. ಈ ಭಾಗದ ರೈತರಿಗೆ, ಸಾರ್ವಜನಿಕರಿಗೆ ಹಾಗೂ ಸಹಕಾರಿಯ ಸದಸ್ಯರಿಗೆ ತನ್ನ ಕೈಲಾದ ಸಹಾಯವನ್ನು ನಿರೀಕ್ಷೆಗೂ ಮೀರಿ ಸಹಕಾರಿಯ ಮೂಲಕ ಮಾಡುತ್ತಿದ್ದು, ನೀವುಗಳು ಸಂಪೂರ್ಣವಾಗಿ ಕೈಜೋಡಿಸಲು ಮುಂದಾಗಬೇಕು. ಮಾಜಿ ಸಹಕಾರಿ ಸಚಿವ ಕೆ.ಎನ್. ರಾಜಣ್ಣನವರ ಜೊತೆ ಸಂಬಂಧ ಉತ್ತಮವಾಗಿರುವುದರಿಂದ, ಈ ಭಾಗದಲ್ಲಿ ಸಹಕಾರಿಯು ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ನಿಮ್ಮಗಳ ಸಹಕಾರದಿಂದ ಅತ್ಯುತ್ತಮ ಸಹಕಾರಿ ಸಂಸ್ಥೆಯಾಗಿ ಬೆಳೆಯಲಿ ಎಂದು ಆಶಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಆರ್. ದೇವರಾಜು ಮಾತನಾಡಿ, ರೈತರಿಂದ, ರೈತರಿಗಾಗಿ, ರೈತರಿಗೋಸ್ಕರನೇ ನಮ್ಮ ಸಹಕಾರ ಸಂಘವು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸಹಕಾರಿಯ ಸಭೆ ಮತ್ತು ಸಮಾರಂಭಗಳಿಗೆ ಕಡ್ಡಾಯವಾಗಿ ಸದಸ್ಯರು ಭಾಗವಹಿಸಿ, ಪರಸ್ಪರ ಬೆಳವಣಿಗೆಗೆ ಪೂರಕವಾಗಿರುತ್ತದೆ. ಡಿಸಿಸಿ ಬ್ಯಾಂಕ್ ಅಧ್ಯಕ್ಷರು,ಮಾಜಿ ಸಚಿವರಾದ ಕೆ.ಎನ್. ರಾಜಣ್ಣನವರ ಮಾರ್ಗದರ್ಶನದಲ್ಲಿ ತಾಲೂಕಿನಲ್ಲಿ ಮಾದರಿ ಸಂಘವಾಗಿ ಕಾರ್ಯನಿರ್ವಹಿಸುತ್ತಿದೆ. ಮುಂದಿನ ದಿನಗಳಲ್ಲಿ ನಿಮ್ಮಗಳ ಸಹಕಾರದಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವುದಾಗಿ ತಿಳಿಸಿದರು.

ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಸದಸ್ಯರ ಮಕ್ಕಳಿಗೆ ಸನ್ಮಾನಿಸಿ, ಪ್ರಶಸ್ತಿ ಪತ್ರ ಹಾಗೂ ಪುಸ್ತಕ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನ್ಯಾಕೇನಹಳ್ಳಿ ವೀರಣ್ಣ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಎಂ.ಮನು, ನಿರ್ದೇಶಕರಾದ ಕೆ.ಎಸ್.ಶಿವಮೂರ್ತಿ, ಕೆ. ಬಸವರಾಜು ಉಪ್ಪಿನಹಳ್ಳಿ, ಜಯಣ್ಣ, ಶೇಷಣ್ಣ, ದೊಡ್ಡ ಲಿಂಗಯ್ಯ, ಅಮೃತಶ್ರೀ ಕೃಷ್ಣಯ್ಯ, ಮಲ್ಲೇಶಯ್ಯ ಮತ್ತು ಶಿಡ್ಲೆಹಳ್ಳಿ ಜಯಣ್ಣ ಸೇರಿದಂತೆ ಸಿಬ್ಬಂದಿ ಹಾಗೂ ಸದಸ್ಯರು ಹಾಜರಿದ್ದರು.

# ದೇವರಿಗೆ ಜಾತಿ-ಧರ್ಮದ ಲೇಪನ ಸಲ್ಲ: ಪ್ರಸನ್ನನಂದಪುರಿ ಶ್ರೀ



**ಮಧುಗಿರಿ:** ದೇವರಿಗೆ ಜಾತಿ,ಧರ್ಮಗಳ ಲೇಪನ ಮಾಡದೆ, ದೇವರು ಒಬ್ಬನೇ ಎಂದಾಗ ನಮ್ಮಗಳ ಬದುಕು ಸಾರ್ಥಕವಾಗುತ್ತದೆ ಎಂದು ರಾಜನಹಳ್ಳಿ ಮಠದ ಡಾ. ಶ್ರೀ ಪ್ರಸನ್ನನಂದ ಪುರಿ ಸ್ವಾಮೀಜಿಗಳು ತಿಳಿಸಿದರು.

ಪಟ್ಟಣದ ತುಮಕೂರು ಬೈಪಾಸ್ ಬಳಿಯ ಸಾಲು ಮರದ ತಿಮ್ಮಕ್ಕನ ಸಸ್ಯೋದ್ಯಾನ ಬಳಿ ನೂತನವಾಗಿ ನಿರ್ಮಿಸಿರುವ ಬೇಡರ ಕಣ್ಣಪ್ಪ ದೇವಾಲಯ ಹಾಗೂ ನಂದಿ ವಿಗ್ರಹಗಳ ಸ್ಥಿರ ಪ್ರತಿಷ್ಠಾಪನೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇವರೊಬ್ಬ ನಾಮ ಹಲವು ಎಂಬಂತೆ ನಮ್ಮೆಲ್ಲರ ಮಾಲೀಕ ಆ ಭಗವಂತನಾಗಿದ್ದು ಆತ ಎಲ್ಲ ರೂಪದಲ್ಲಿಯು ಬರುತ್ತಾನೆ. ಬೇಡರ ಕಣ್ಣಪ್ಪ ದೇವಾಲಯವು ಒಂದು ಸಮುದಾಯಕ್ಕೆ ಸೀಮಿತವಾಗಿರದೆ ಎಲ್ಲರೂ ಸಹ ಪೂಜಿಸುವಂತಹ ಸುಂದರವಾದ ದೇವಾಲಯ ನಿರ್ಮಿಸಲಾಗಿದೆ. ಭಾರತೀಯ ಸಂಸ್ಕೃತಿಯ ಲ್ಲಿ ಮೂರು ಉಪಾಸನ ಪದ್ಧತಿಗಳು ಇದ್ದು, ಶೈವಾ ಉಪಾಸನದಲ್ಲಿ ಶಿವನನ್ನು, ವೈಷ್ಣವ ಪದ್ಧತಿಯಲ್ಲಿ ವಿಷ್ಣು ವನ್ನು, ಶಾಕ್ತ ಪದ್ಧತಿಯಲ್ಲಿ ಶಕ್ತಿ ದೇವರುಗಳನ್ನು ಪೂಜಿಸಲಾಗುತ್ತದೆ.

ಬಹುತೇಕ ಭಾರತೀಯರು ದೇವರ ಬಗ್ಗೆ ಅನೇಕ ಗೊಂದಲಗಳನ್ನು ಇಟ್ಟುಕೊಂಡಿದ್ದಾರೆ. ನಾವು ಯಾರೂ ಗೊಂದಲಗಳನ್ನು ಇಟ್ಟುಕೊಳ್ಳಬಾರದು, ನೇರ ನುಡಿಯ ಕೆ.ಎನ್. ರಾಜಣ್ಣನವರು ಅಧಿಕಾರ ಇರಲಿ, ಬಿಡಲಿ ಅವರು ಧೃತಿಗೆಟ್ಟಿಲ್ಲ. ಕೆಲವರ ಪಿತೂರಿಯಿಂದ ಅಧಿಕಾರ ಹೋದರೂ ಸಹ ಕುಗ್ಗಿಲ್ಲ. ಅವರು ಜನರ ಮಧ್ಯೆ ಇರುವಂತಹ ಜನ ನಾಯಕರು. ಅವರು ಬೇಡರ ಕಣ್ಣಪ್ಪ ದೇವಾಲಯವನ್ನು ನಿರ್ಮಿಸುವುದರ ಮೂಲಕ ತಮ್ಮ ಭಕ್ತಿಯ ಸಹಕಾರ ಮತ್ತು ಸಹಾಯವನ್ನು ನೀಡಿರುವುದು ಉತ್ತಮ ಕಾರ್ಯವಾಗಿದೆ.

ಇಂದೂ ರಾಜ್ಯದಲ್ಲಿ ಬರಗಾಲದ ಛಾಯೆ ಇದ್ದೂ ಸಕಾಲಕ್ಕೆ ಮಳೆ ಬೆಳೆಯಾಗದೆ ರೈತರು ಕಂಗಲಾಗಿದ್ದಾರೆ. ರೈತರ ಪರವಾಗಿ ಸರ್ಕಾರ ಕೈ ಜೋಡಿಸಬೇಕು. ಮುಂದಿನ ದಿನಗಳಲ್ಲಿ ಉತ್ತಮವಾದ ವಾತವರಣ ಸೃಷ್ಟಿಯಾಗಲು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದರು.

ಜಿ.ಪಂ. ಮಾಜಿ ಅಧ್ಯಕ್ಷೆ ಎಸ್. ಆರ್ . ಶಾಂತಲಾ ರಾಜಣ್ಣ ಮಾತನಾಡಿ ಬೇಡರ ಕಣ್ಣಪ್ಪನ ದೇವಾಲಯವು ಎಲ್ಲರ ಸಹಕಾರದಿಂದ ನಿರ್ಮಿಸಲಾಗಿದೆ. ಸಮುದಾಯದವರು ಧೃಡ ಸಂಕಲ್ಪದಿಂದ ಒಗ್ಗಟ್ಟಿನಿಂದ ಇರಬೇಕು. ಕಳೆದ 14 ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಈ ದೇಗುಲವನ್ನು ಕೆ.ಎನ್.ರಾಜಣ್ಣ ಮತ್ತು ಪುತ್ರ ರಾಜೇಂದ್ರ ರವರ ಸಹಕಾರದಿಂದ ಇಂದು ಜೀರ್ಣೋದ್ಧಾರ ಮಾಡಲಾಗಿದೆ. ಹಿಂದಿನ ಕಾಲದಲ್ಲಿ ಬೇಡ ಜನಾಂಗದವರು ತಮ್ಮ ಕುಲ ಕಸುಬನ್ನು ಪ್ರಾಣಿಗಳನ್ನು ಬೇಟೆ ಯಾಡಿ ಜೀವನ ಸಾಗಿಸುತ್ತಿದ್ದರು. ಆದರೆ ಇಂದಿನ ಜೀವನ ಶೈಲಿ ಬದಲಾದಂತೆ ಅವರು ಬದಲಾಗುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಇತ್ತೀಚೆಗೆ ನಮ್ಮ ಟ್ರಸ್ಟ್ ವತಿಯಿಂದ ಪದವಿ ಮಟ್ಟದ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟದ ಅಕ್ಷರ ಅಮೃತ ಯೋಜನೆಯ ಆರಂಭದಿಂದಾಗಿ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಹಾಜರಾತಿಯು ಹೆಚ್ಚಾಗಿದೆ. ಸಮುದಾಯದಲ್ಲಿ ಶಕ್ತಿ, ಗುರಿ, ಉದ್ದೇಶಗಳಿದ್ದರೂ ಒಗ್ಗಟ್ಟಿನ ಕೊರತೆ ಇದೆ. ನಾವು ಬೇರೆಯವರ ಬೆಳವಣಿಗೆಯ ವಿಚಾರದಲ್ಲಿ ಕಾಲನ್ನು ಎಳೆಯುವುದು ಬೇಡ. ಇಂದಿನ ಕಾಲಘಟ್ಟದಲ್ಲಿ ಸೂಪರ್ ಪವರ್ ಎಂದರೆ ರಾಜಕೀಯ ಶಕ್ತಿ. ಯಾರಿಗಾದರೂ ಸಹಾಯ ಮಾಡಬೇಕೆಂದರೆ ರಾಜಕೀಯ ಅಧಿಕಾರವಿರಬೇಕು. ಉನ್ನತ ಹುದ್ದೆಯಲ್ಲಿರುವವರು ನಿಯಮ ನಿಬಂಧನೆಗಳನ್ನು ಬರೆಯುವುದಾದರೆ ರಾಜಕೀಯ ಅಧಿಕಾರ ಬರೆಸುತ್ತದೆ. ಇಂತಹ ಶಕ್ತಿಗೆ ಪೂರಕವಾಗಿ ಸಮುದಾಯದವರು ಅಧಿಕಾರ ಹಿಡಿದಾಗ ಸಮುದಾಯಕ್ಕೆ ಸಮಾಜಕ್ಕೆ ಹೆಚ್ಚು ಮಹತ್ವ ದೊರೆಯುತ್ತದೆ ಎಂದರು.

ತಾಲೂಕು ನಾಯಕ ಸಂಘದ ಅಧ್ಯಕ್ಷ ಜಿ.ಎಸ್. ಜಗದೀಶ್ ಕುಮಾರ್ ಮಾತನಾಡಿ ಶಾಸಕರಾದ ಕೆ.ಎನ್. ರಾಜಣ್ಣ ನವರು ವಿದ್ಯಾಭ್ಯಾಸಕ್ಕೆ ಮೊದಲಿನಿಂದಲೂ ಹೆಚ್ಚು ಮಹತ್ವ ನೀಡುತ್ತಿದ್ದಾರೆ. 1993 ರಲ್ಲಿ ಸಮುದಾಯದವರಿಗಾಗಿ ವಸತಿ ನಿಲಯವನ್ನು ನಿರ್ಮಿಸಿಕೊಟ್ಟರು. ನಂತರ ಇದೇ ವಸತಿ ನಿಲಯದ ಕಟ್ಟಡವನ್ನು ಇತ್ತೀಚೆಗೆ ನವೀಕರಣ ಗೊಳಿಸಿದರು. ಅಂದಿನ ಅಧ್ಯಕ್ಷರಾಗಿದ್ದ ಎಲ್ಲರ ಕಾಲದಲ್ಲೂ ತಾಲೂಕು ಸಂಘವು ಅಭಿವೃದ್ಧಿ ಕಂಡಿದ್ದು ಇದರ ಜತೆಯಲ್ಲಿ ಬೇಡರ ಕಣ್ಣಪ್ಪ ದೇವಾಲಯವು ಜೀರ್ಣೋದ್ಧಾರ ಗೊಳ್ಳಲು ಕೆ.ಎನ್. ಆರ್ ಕುಟುಂಬದ ಸಹಕಾರ ಹೆಚ್ಚಿದೆ ಎಂದರು. ಬಿಇಓ ಹನುಮಂತರಾಯಪ್ಪ, ಶಂಕರನಾರಾಯಣ, ಡಿ.ಎಸ್ .ಮುನೀಂದ್ರ ಕುಮಾರ್, ಆಂಜಿನಪ್ಪ, ರಂಗಪ್ಪ, ಚಂದ್ರಮ್ಮ, ಶೈಲಾಶ್ರೀ ನಾಗರಾಜು, ಮಂಜುಳಾ ರಂಗಸ್ವಾಮಿ, ಕೆ.ಟಿ.ಸಿದ್ದೇಶ್ವರ್, ಕಿಶೋರ್, ಬೇಡರ ಕಣ್ಣಪ್ಪ ದೇವಾಲಯ ಟ್ರಸ್ಟ್ ಅಧ್ಯಕ್ಷ ರಂಗನಾಥ್, ಸಿರಿಯಪ್ಪ, ಮುದ್ದಪ್ಪ, ಹೆಚ್ ಎಂ.ಟಿ.ವೆಂಕಟೇಶ್, ಜಿಲ್ಲಾ ಅಧ್ಯಕ್ಷ ಪುರುಷೋತ್ತಮ್, ಜಯರಾಂ, ಪಾಳೇಗಾರ್ ಲೋಕೇಶ್, ಈಶ್ವರಯ್ಯ, ವೆಂಕಟರವಣಪ್ಪ, ಪ್ರೆಸ್ ಕರಿಯಣ್ಣ, ಮುದ್ದುಕೃಷ್ಣ, ಹಾಗೂ ಸಮುದಾಯದವರು ಇದ್ದರು.

# ಹಾಲಿನ ದರ ಹೆಚ್ಚಿಸಲು ಆಗ್ರಹಿಸಿ ಬೆಂಗಳೂರು ಚಲೋ: ಬೇಡಿಕೆ ಈಡೇರದಿದ್ದರೆ ಆಮರಣಾಂತ ಉಪವಾಸ: ಎಸ್.ಆರ್.ಗೌಡ



**ಶಿರಾ:** ರಾಜ್ಯಾದ್ಯಂತ ತೀವ್ರವಾಗಿ ಕಾಡುತ್ತಿರುವ ಬರಗಾಲದ ನಡುವೆ ಸಂಕಷ್ಟಕ್ಕೆ ಸಿಲುಕಿರುವ ರೈತರು ಹಾಗೂ ಹಾಲು ಉತ್ಪಾದಕರ ನೆರವಿಗೆ ಧಾವಿಸಬೇಕಾದ ಸರ್ಕಾರ, ಹಾಲಿನ ದರ ಹೆಚ್ಚಳಕ್ಕೆ ಹಿಂದೇಟು ಹಾಕುತ್ತಿರುವುದನ್ನು ಖಂಡಿಸಿ ರಾಜ್ಯದ ಎಲ್ಲಾ ಹಾಲು ಉತ್ಪಾದಕ ಸಹಕಾರ ಸಂಘಗಳ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ್ದು, ತಾಲ್ಲೂಕಿನಿಂದ ಸುಮಾರು 2 ಸಾವಿರಕ್ಕೂ ಅಧಿಕ ಹಾಲು ಉತ್ಪಾದಕರು ಪಾಲ್ಗೊಳ್ಳಲು ಹೊರಟಿದ್ದೇವೆ ಎಂದು ತುಮುಲ್ ನಿರ್ದೇಶಕ ಎಸ್. ಆರ್. ಗೌಡ ಹೇಳಿದರು.

ಅವರು ತಾಲ್ಲೂಕಿನ ದೊಡ್ಡಆಲದಮರ (ಹನುಮಂತ ನಗರ) ದಲ್ಲಿ ರಾಜ್ಯಾದ್ಯಂತ ಹಾಲು ಉತ್ಪಾದಕರು ಹಾಲಿನ ದರ ಹೆಚ್ಚಳಕ್ಕೆ ಆಗ್ರಹಿಸಿ ಫ್ರೀಡಂ ಪಾರ್ಕ್‌ನಲ್ಲಿ ಸೆ. 22 ರಂದು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು, ನಮ್ಮ ಹಾಲು, ನಮ್ಮ ಜೀವನೋಪಾಯ, ನಮ್ಮ ಹಕ್ಕು ಎಂಬ ಧ್ಯೇಯ ವಾಕ್ಯದೊಂದಿಗೆ ಬೆಂಗಳೂರು ಚಲೋ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ರಾಜ್ಯದಲ್ಲಿ ಮಳೆಯಿಲ್ಲದೆ ತೀವ್ರ ಬರಗಾಲ ಆವರಿಸಿದ್ದು, ರೈತರು ಹೈನುಗಾರಿಕೆಯನ್ನು ಅವಲಂಬಿಸಿ ಜೀವನ ನಡೆಸುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆದರೆ, ಉತ್ಪಾದನಾ ವೆಚ್ಚಕ್ಕೆ ತಕ್ಕಂತೆ ಹಾಲಿನ ದರ ಸಿಗುತ್ತಿಲ್ಲ, ನೀರಿಗಿಂತ ಹಾಲೇ ಅಗ್ಗ: "ಇಂದು ಮಾರುಕಟ್ಟೆಯಲ್ಲಿ ಒಂದು ಲೀಟರ್ ಕುಡಿಯುವ ನೀರಿಗೆ 30 ರಿಂದ 40 ರೂಪಾಯಿ ಬೆಲೆ ಇದೆ. ಆದರೆ, ರೈತರು ಹಗಲಿರುಳು ಶ್ರಮಪಟ್ಟು ಉತ್ಪಾದಿಸುವ ಹಾಲಿಗೆ ಕೇವಲ 32 ರಿಂದ 36 ರೂಪಾಯಿ ಮಾತ್ರ ನಿಗದಿಪಡಿಸಲಾಗಿದೆ. ಇದು ಶ್ರಮಜೀವಿಗಳಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ಆದ್ದರಿಂದ ತಕ್ಷಣವೇ ಹಾಲಿನ ದರವನ್ನು ಕನಿಷ್ಠ 5 ರೂ.ಗೆ ಹೆಚ್ಚಿಸಬೇಕು ಮತ್ತು ಪ್ರತಿ ಲೀಟರ್ ಹಾಲಿನ ದರವನ್ನು ಕನಿಷ್ಠ 40 ರೂ.ಗೆ ನಿಗದಿಪಡಿಸಬೇಕು" ಸರ್ಕಾರ ಪ್ರಸ್ತುತ ನೀಡುತ್ತಿರುವ 5 ರೂ. ಪ್ರೋತ್ಸಾಹ ಧನದ ಜೊತೆಗೆ ಹೆಚ್ಚುವರಿಯಾಗಿ 5 ರೂ. ಸೇರಿಸಿ, ಒಟ್ಟು 10 ರೂ. ಪ್ರೋತ್ಸಾಹ ಧನವನ್ನು ಹಾಲು ಉತ್ಪಾದಕರಿಗೆ ನೀಡಬೇಕು, ಸಹಕಾರ ಸಂಘಗಳ ಕಾರ್ಯದರ್ಶಿಗಳ ಮೇಲಿನ ಕಾರ್ಯದೊತ್ತಡ ಹೆಚ್ಚಾಗಿದೆ. ಹಿಂದೆ ಸರ್ಕಾರ ಕಾರ್ಯದರ್ಶಿಗಳಿಗೆ ನೀಡುತ್ತಿದ್ದ 30 ಪೈಸೆ ಪ್ರೋತ್ಸಾಹ ಧನವನ್ನು ಈಗ ನಿಲ್ಲಿಸಲಾಗಿದೆ. ಅದನ್ನು ಮರುಪ್ರಾರಂಭಿಸಿ, ಪ್ರತಿ ಲೀಟರ್‌ಗೆ 50 ಪೈಸೆ ಪ್ರೋತ್ಸಾಹ ಧನವನ್ನು ಕಾರ್ಯದರ್ಶಿಗಳಿಗೂ ನೀಡಬೇಕು. ಜೊತೆಗೆ ಅವರ ಗೌರವಧನವನ್ನೂ ಹೆಚ್ಚಿಸಬೇಕು" ಎಂದು ಒತ್ತಾಯಿಸಿದರು.

ಒಕ್ಕೂಟಗಳಿಗೆ ಸ್ವಾಯತ್ತತೆ ನೀಡಿ: "ಹಾಲು ಉತ್ಪಾದಕರ ಸಹಕಾರ ಸಂಘಗಳು, ಹಾಲಿನ ಒಕ್ಕೂಟಗಳು ಮತ್ತು ಮಹಾಮಂಡಳಕ್ಕೆ ಹಾಲಿನ ದರವನ್ನು ನಿರ್ಧರಿಸುವ ಸ್ವಾಯತ್ತತೆಯನ್ನು (Autonomy) ಸರ್ಕಾರ ನೀಡಬೇಕು. ದರ ಹೆಚ್ಚಳ ಮಾಡುವ ಶಕ್ತಿಯನ್ನು ಒಕ್ಕೂಟಗಳಿಗೆ ನೀಡದೆ, ಸರ್ಕಾರ ಪದೇ ಪದೇ ದರ ಏರಿಕೆಗೆ ತಡೆಹಿಡಿಯುತ್ತಿರುವುದು ಸರಿಯಲ್ಲ. ನಮ್ಮ ಹಾಲಿನ ದರವನ್ನು ನಾವೇ ನಿರ್ಧರಿಸುವ ಅಧಿಕಾರ ನಮಗೆ ಸಿಗಬೇಕು" ಎಂದು ಸರ್ಕಾರವನ್ನು ಒತ್ತಾಯಿಸಿದ. ಎಸ್. ಆರ್. ಗೌಡ, ತುಮುಲ್ ನಿರ್ದೇಶಕ.

ಆಮರಣಾಂತ ಉಪವಾಸದ ಎಚ್ಚರಿಕೆ: "ಹಾಲಿನ ದರವನ್ನು ಒಂದು ಲೀಟರ್‌ಗೆ ಕನಿಷ್ಠ 40 ರೂ.ಗೆ ಏರಿಕೆ ಮಾಡಬೇಕು ಮತ್ತು ಬರಗಾಲದ ಕಾಮಗಾರಿಗಳನ್ನು ಆರಂಭಿಸಬೇಕು ಎಂದು ಆಗ್ರಹಿಸಿ ಕೇವಲ ಸಿರಾ ತಾಲೂಕಿನಿಂದಲೇ ಸುಮಾರು 2,500 ರಿಂದ 3,000 ರೈತರು ಬೆಂಗಳೂರಿನಲ್ಲಿ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಹೊರಟಿದ್ದು . ಇದು ಸರ್ಕಾರಕ್ಕೆ ನಾವು ನೀಡುತ್ತಿರುವ ಸಾಂಕೇತಿಕ ಎಚ್ಚರಿಕೆ. ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು ಹಾಲಿನ ದರ ಹೆಚ್ಚಿಸಬೇಕು, ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಉಗ್ರ ಹೋರಾಟದ ಜೊತೆಗೆ ಆಮರಣಾಂತ ಧರಣಿ ಸತ್ಯಾಗ್ರಹವನ್ನು (ಉಪವಾಸ) ಹಮ್ಮಿಕೊಳ್ಳಲಾಗುವುದು" ಎಂದು ಸರ್ಕಾರಕ್ಕೆ ಖಡಕ್ ಎಚ್ಚರಿಕೆ ನೀಡಿದ ತುಮುಲ್ ನಿರ್ದೇಶಕ ಎಸ್. ಆರ್. ಗೌಡ.

**ಜಾನುವಾರು ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಿ:** "ಸಿರಾ ಸೇರಿದಂತೆ ರಾಜ್ಯದ ಬಹುತೇಕ ಭಾಗಗಳಲ್ಲಿ ತೀವ್ರ ಬರಗಾಲ ಆವರಿಸಿದೆ. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿನ ಅಭಾವ ತೀವ್ರವಾಗಿದೆ. ರೈತರು ಕಂಗಾಲಾಗಿದ್ದಾರೆ. ಆದ್ದರಿಂದ, ಸರ್ಕಾರ ತುರ್ತಾಗಿ ಗೋಶಾಲೆಗಳನ್ನು ನಿರ್ಮಾಣ ಮಾಡಬೇಕು ಹಾಗೂ ರೈತರಿಗೆ ಅಗತ್ಯವಿರುವ ಮೇವಿನ ಬಿತ್ತನೆ ಬೀಜಗಳನ್ನು ಉಚಿತವಾಗಿ ವಿತರಿಸಬೇಕು. ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಲ್ಲಲ್ಲಿ ನೀರಿನ ತೊಟ್ಟಿಗಳನ್ನು ನಿರ್ಮಿಸುವ ಮೂಲಕ ತುರ್ತು ಬರಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಬೇಕು" ಎಂದು ಹಾಲು ಉತ್ಪಾದಕರು ಒತ್ತಾಯಿಸಿದರು.

# ಅಧಿಕಾರಿಗಳ ಜೊತೆ ಸಭೆ ನಡೆಸಿದ ಎಂಎಲಿ ಆರ್. ರಾಜೇಂದ್ರ



**ಮಧುಗಿರಿ:** ಪಟ್ಟಣದ ತಾಲೂಕು ಕಛೇರಿಯ ಶಾಸಕರ ಕಛೇರಿಯಲ್ಲಿ ತಹಶೀಲ್ದಾರ್ ನಂದಿನಿ ಅವರ ಸಮ್ಮುಖದಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿದ ಎಂಎಲ್ಸಿ ಆರ್. ರಾಜೇಂದ್ರ

ಮಧುಗಿರಿ ತಾಲ್ಲೂಕನ್ನು ಈಗಾಗಲೇ ಬರ ಪೀಡಿತ ಪ್ರದೇಶ ಎಂದು ಘೋಷಿಸಲಾಗಿದ್ದು ಕುಡಿಯುವ ನೀರು, ನೈರ್ಮಲ್ಯ, ಜಾನುವಾರುಗಳಿಗೆ ಮೇವು, ನೀರು, ಪ್ರತಿ ಗ್ರಾಮಗಲ್ಲಿ ಮೂಲ ಸೌಕರ್ಯಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಕಚೇರಿಗೆ ಬರುವ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಿ ಅವರ ಕೆಲಸಗಳನ್ನು ಆದಷ್ಟು ಶೀಘ್ರವಾಗಿ ಮಾಡಿಕೊಡುವಂತೆ ಸೂಚಿಸಿದರು. ಈ ಸಂದರ್ಭದಲ್ಲಿ ಡಿವೈಎಸ್ಪಿ ಮಂಜುನಾಥ್, ಎಡಿ ಧನಂಜಯ್, ಪುರಸಭಾ ಮುಖ್ಯಾಧಿಕಾರಿ ಸುರೇಶ್, ಅರಣ್ಯಾಧಿಕಾರಿ ಸುರೇಶ್, ಕೃಷಿ ಸಹಾಯಕ ನಿರ್ದೇಶಕರಾದ ಚೆನ್ನಕೇಶವಮೂರ್ತಿ, ಇಇ ಹನುಮಂತ ರಾವ್, ಕೆಪಿಸಿಸಿ ಸದಸ್ಯ ಮಲ್ಲಿಕಾರ್ಜುನಯ್ಯ, ಮಾಜಿ ಪುರಸಭಾ ಅಧ್ಯಕ್ಷರಾದ ಎಂ.ಕೆ.ನಂಜುಂಡರಾಜು, ಲಾಲಾಪೇಟೆ ಮಂಜುನಾಥ್, ಮುಖಂಡ ಕುರುಬರಹಳ್ಳಿ ಹರ್ಷ, ತಾಲ್ಲೂಕು ಮಟ್ಟದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸಾರ್ವಜನಿಕರು ಭಾಗವಹಿಸಿದ್ದರು.



ಮಧುಗಿರಿ ಪಟ್ಟಣದಲ್ಲಿ ಆರ್ಯವೈಶ್ಯ ಮಂಡಳಿ, ವಾಸವಿ ಯುವಜನ ಸಂಘ, ಹಾಗೂ ಅಂಗ ಸಂಸ್ಥೆಗಳ ವತಿಯಿಂದ ದೊಡ್ಡಪೇಟೆಯ ಶ್ರೀ ಕನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ್ದ ಶ್ರೀ ಪ್ರಸನ್ನ ಗಣಪತಿಯನ್ನು ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ವಿಸರ್ಜಿಸಲಾಯಿತು. ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಶ್ರೀನಿವಾಸ್ ಮೂರ್ತಿ, ವಾಸವಿ ಯುವಜನ ಸಂಘದ ಅಧ್ಯಕ್ಷ ಶಿಶಿರ್ ಮತ್ತಿತರರು ಹಾಜರಿದ್ದರು.



ಮಧುಗಿರಿ ಪಟ್ಟಣಾದ ರಾಘವೇಂದ್ರ ಕಾಲೋನಿಯಲ್ಲಿರುವ ಶ್ರೀ ಶಂಕರ ಮಠದಲ್ಲಿ ಶ್ರೀ ಶಂಕರ ಸೇವಾ ಸಮಿತಿ ವತಿಯಿಂದ ಪ್ರತಿಷ್ಠಾಪಿಸಿದ್ದ ಗಣೇಶನ ವಿಸರ್ಜನಾ ಮಹೋತ್ಸವ ನಡೆಯಿತು.

# ವಾಟರ್ ಪ್ಲಾಂಟ್–ಕಂಪ್ಯೂಟರ್ ಕೊಡುಗೆ



**ಮಧುಗಿರಿ /ಕೊಡಿಗೇನಹಳ್ಳಿ:** ಐ.ಡಿ.ಹಳ್ಳಿ ಹೋಬಳಿಯ ವಿಠಲಾಪುರ ಗ್ರಾಮದ ಸರ್ಕಾರಿ ಕಿರಿಯ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯ ಮತ್ತು ಶೈಕ್ಷಣಿಕ ಪ್ರಗತಿಗೆ ಉತ್ತೇಜನ ನೀಡುವ ಉದ್ದೇಶದಿಂದ ರೋಟರಿ ಸಂಸ್ಥೆಯಿಂದ 150 ಲೀಟರ್ ಸಾಮರ್ಥ್ಯದ ಆರ್.ಒ. ವಾಟರ್ ಪ್ಲಾಂಟ್ ಹಾಗೂ ಕಂಪ್ಯೂಟರ್ ಸಹಿತ ಸ್ಮಾರ್ಟ್ ಟಿವಿಯನ್ನು ಶನಿವಾರ ದೇಣಿಗೆಯಾಗಿ ನೀಡಲಾಯಿತು.

ಬೆಂಗಳೂರು ಬಸವೇಶ್ವರ ನಗರದ ರೋಟರಿ ಅಧ್ಯಕ್ಷ ರೋಟರಿಯನ್ ವಾಸುದೇವ್ ಮಾತನಾಡಿ, ವಿಠಲಾಪುರ ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು ದೊರೆಯಬೇಕು ಎಂಬ ಉದ್ದೇಶದಿಂದ 150 ಲೀಟರ್ ಸಾಮರ್ಥ್ಯದ ಆರ್.ಒ. ವಾಟರ್ ಪ್ಲಾಂಟ್ ಒದಗಿಸಲಾಗಿದೆ. ಜೊತೆಗೆ ವಿದ್ಯಾರ್ಥಿಗಳ ಕಲಿಕೆಯನ್ನು ತಂತ್ರಜ್ಞಾನಾಧಾರಿತವಾಗಿಸುವ ನಿಟ್ಟಿನಲ್ಲಿ ಕಂಪ್ಯೂಟರ್ ಹಾಗೂ ಸ್ಮಾರ್ಟ್ ಟಿವಿಯನ್ನು ನೀಡಲಾಗಿದೆ. ಗುಣಮಟ್ಟದ ಶಿಕ್ಷಣ ಮತ್ತು ಮಕ್ಕಳ ಆರೋಗ್ಯವನ್ನು ಸುಧಾರಿಸುವ ಸಲುವಾಗಿ ಅಗತ್ಯವಿರುವ ಶಾಲೆಗಳಿಗೆ ನೆರವು ನೀಡುವುದು ರೋಟರಿ ಸಂಸ್ಥೆಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.ವಿದ್ಯಾರ್ಥಿಗಳು ಅವುಗಳನ್ನು ಸದ್ಬಳಕೆ ಮಾಡಿಕೊಂಡರೆ ನಮ್ಮ ದೇಣಿಗೆಗೆ ಸಾರ್ಥಕತೆ ಸಿಗುತ್ತದೆ ಎಂದರು.

ಮುಖ್ಯಶಿಕ್ಷಕ ಸಿ.ಈ. ಶಾಂತಕುಮಾರ್ ಮಾತನಾಡಿ, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಹಾಗೂ ಶಾಲೆಯ ಮೂಲ ಸೌಕರ್ಯ ಅಭಿವೃದ್ಧಿಗೆ ಈ ಕೊಡುಗೆ ತುಂಬಾ ಉಪಯುಕ್ತವಾಗಿವೆ ಎಂದು ರೋಟರಿ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ರೋಟರಿಯನ್ ಗಳಾದ ರವಿಕುಮಾರ್, ರಾಮು ಸಾರ್ಜೆಂಟ್, ಭಾನುಪ್ರಕಾಶ್ ಮುರಳೀಧರ್ ಎಸ್‌ಡಿಎಂಸಿ ಅಧ್ಯಕ್ಷ ಹನುಮಂತರಾಯಪ್ಪ, ಸದಸ್ಯರು, ಶಿಕ್ಷಕ ಸುಬ್ರಮಣ್ಯ, ಹಿರಿಯ ವಿದ್ಯಾರ್ಥಿಗಳು ಮತ್ತು ಪಾಲಕರು ಭಾಗವಹಿಸಿದ್ದರು.

# ಹಾಲಿನ ದರ ಹಾಗೂ ಪ್ರೋತ್ಸಾಹ ಧನ 10 ರೂ ಹೆಚ್ಚಿಸಿ ರೈತರ ಉಳಿಸಿ: ಕೊಂಡವಾಡಿ ಚಂದ್ರಶೇಖರ್





**ಮಧುಗಿರಿ:** ತೀವ್ರ ಬರಗಾಲದ ಹಿನ್ನೆಲೆಯಲ್ಲಿ ಹಾಲು ಉತ್ಪಾದಕರು ಹಾಗೂ ರೈತರು ಸಂಕಷ್ಟಕ್ಕೆ ಸಿಲುಕಿದ್ದು ರಾಜ್ಯ ಸರ್ಕಾರ ರೈತರ ಹಾಗೂ ಹಾಲು ಉತ್ಪಾದಕರ ನೆರವಿಗೆ ಮುಂದಾಗಲು ಪ್ರತಿ ಲೀ. ಹಾಲಿಗೆ 10 ರೂ, ಹಾಗೂ ಸರ್ಕಾರದಿಂದ ನೀಡುವ ಲೀಟರ್ ಹಾಲಿಗೆ ಪ್ರೋತ್ಸಾಹ ಧನವನ್ನು ಕೂಡ 10 ರೂ ಹೆಚ್ಚಿಸಿ ರೈತರ ನೆರವಿಗೆ ನಿಲ್ಲಬೇಕೆಂದು ತುಮುಲ್ ಮಾಜಿ ಅಧ್ಯಕ್ಷ ಹಾಗೂ ಹಾಲಿ ನಿರ್ದೇಶಕ ಕೊಂಡವಾಡಿ ಚಂದ್ರಶೇಖರ್ ರೈತರ ಪರವಾಗಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಪಟ್ಟಣದ ಉಪವಿಭಾಗಾಧಿಕಾರಿ ಕಚೇರಿಯಲ್ಲಿ ಈ ಕುರಿತು ಮನವಿ ಪತ್ರವನ್ನು ಸಲ್ಲಿಸಿ ಮಾತನಾಡುತ್ತಾ ತುಮಕೂರು ಜಿಲ್ಲೆಯ ಅತಿ ಹಿಂದುಳಿದ ಬರಪೀಡಿತ ತಾಲೂಕು, ಮಧುಗಿರಿ. ಇಲ್ಲಿ ರೈತರು ಹೈನುಗಾರಿಕೆಯನ್ನು ನಂಬಿದ್ದು ತಾಲೂಕಿನಲ್ಲಿ 175 ಹಾಲಿನ ಡೈರಿಗಳು ಪ್ರತಿದಿನ ಒಂದು ಲಕ್ಷ 1.20 ಲಕ್ಷ ಲೀಟರ್ ಹಾಲು ಉತ್ಪಾದಿಸುತ್ತಿದ್ದಾರೆ. ಆದರೆ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರ ಹಾಲಿಗೆ ಯಾವುದೇ ಕನಿಷ್ಠ ದರವು ಸಿಗುತ್ತಿಲ್ಲ. ನೆರೆ ರಾಜ್ಯಗಳಲ್ಲಿ ಈಗಾಗಲೇ ಅತಿ ಹೆಚ್ಚು ದರವನ್ನು ಅಲ್ಲಿನ ಸರ್ಕಾರ ಪ್ರತಿ ಲೀಟರ್ ಗೆ ನೀಡುತ್ತಿದ್ದು ನಮ್ಮ ರಾಜ್ಯದಲ್ಲಿ ಮಾತ್ರ ಕಡಿಮೆಯಾಗಿದೆ. ಹಾಲು ಉತ್ಪಾದನಾ ವೆಚ್ಚವು ಜಾಸ್ತಿಯಾಗಿದೆ. ಆದರೆ ಒಕ್ಕೂಟಗಳಿಂದ ಕಡಿಮೆ ದರವನ್ನ ನೀಡಲಾಗುತ್ತಿದೆ. ರೈತರ ಹಿತಾಸಕ್ತಿಯನ್ನು ಮನಗಂಡು ತುಮಲ್ ಹಾಲು ಒಕ್ಕೂಟ ಕಳೆದ ವಾರ ಲೀಟರ್ ಗೆ 1 ರೂ. ಹೆಚ್ಚಿಸಿದ್ದು ಪ್ರತಿದಿನ 3 ಕೋಟಿ ರೂಪಾಯಿ ಹೆಚ್ಚುವರಿ ವೆಚ್ಚವಾಗುತ್ತಿದೆ. ಆದಕಾರಣ ಸರಕಾರವೇ ಹಾಲು ಉತ್ಪಾದಕರ ನೆರವಿಗೆ ನಿಂತು ಪ್ರೋತ್ಸಾಹ ಧನ ಹಾಗೂ ಲೀಟರ್ ಹಾಲಿಗೆ 10 ರೂ ಹೆಚ್ಚಿಸಿ ರೈತರ ಕೈಹಿಡಿಯಬೇಕೆಂದು ಮನವಿ ಮಾಡಿದರು.

ಇದಲ್ಲದೆ ಬರಗಾಲ ವಿಪರೀತವಾಗುತ್ತಿದ್ದು ಎಲ್ಲಿಯೂ ಸಹ ಮೇವು ಸಿಗುತ್ತಿಲ್ಲ. ಹಾಗಾಗಿ ತಾಲೂಕಿನಲ್ಲಿ ಶೀಘ್ರವಾಗಿ ಗೋಶಾಲೆಯನ್ನ ಆರಂಭಿಸಬೇಕು. ಡೇರಿಗಳಿಗೆ ನೀಡುವ ಪಶು ಆಹಾರವನ್ನ ರಿಯಾಯಿತಿ ದರದಲ್ಲಿ ನೀಡಬೇಕು. ಮಳೆಬಾರದೇ ಹೋಗುತ್ತಿದ್ದು ಹೇಮಾವತಿ ಹಾಗೂ ಎತ್ತಿನಹೊಳೆ ಯೋಜನೆ ಅಡಿ ಕೆರೆಗಳಿಗೆ ನೀರು ತುಂಬಿಸಲು ಕನಿಷ್ಟ 1 ಟಿಎಂಸಿ ನೀರು ಹರಿಸಿ ಜಾನುವಾರುಗಳ ದಾಹವನ್ನು ತಡೆಸುವಂತಹ ಪುಣ್ಯದ ಕೆಲಸಕ್ಕೆ ಸರ್ಕಾರ ಮುಂದಾಗಬೇಕು. ತಕ್ಷಣ ಈ ಮೇಲಿನ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಮುಖಂಡರಾದ ಪುರಸಭಾ ಮಾಜಿ ಸದಸ್ಯ ಎಂ.ಆರ್. ಜಗನ್ನ, ಸುಮುಖ್ ಚಂದ್ರಶೇಖರ್, ಸಿಡಿದರಗಲ್ಲು ಶ್ರೀನಿವಾಸ್, ಕಾಂತಣ್ಣ, ಸಿದ್ದಪ್ಪ, ಹಾಗೂ ಸಾವಿರಾರು ರೈತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

## ನಾನು ಓಡಿ ಹೋಗಲ್ಲ: ಗೋಟೂರು ಶಿವಪ್ಪ

ನಾನೂ ರೈತರ ಮಗ, ಓಡಿ ಹೋಗುವವನಲ್ಲ ಎಂದ ಉಪವಿಭಾಗಾಧಿಕಾರಿ ಗೋಟೂರು ಶಿವಪ್ಪ, ಮನವಿಯನ್ನ ಸ್ವೀಕರಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿದರು. ಶಿವಪ್ಪನವರಿಗೆ ರೈತರು ಸುಮ್ಮನೆ ಹೇಳಿ ಓಡಿ ಹೋಗಬಾರದು ಎಂದು ಕೆಣಕಿದರು. ಇದಕ್ಕೆ ಅಷ್ಟೇ ದಿಟ್ಟವಾಗಿ , ನಗುತ್ತಲೇ ಉತ್ತರಿಸಿದ ಎಸಿ ರವರು ನಾನು ಕೂಡ ರೈತನ ಮಗ ಓಡಿ ಹೋಗುವವನಲ್ಲ ನಿಮ್ಮ ಸಮಸ್ತ ಬೇಡಿಕೆಗಳನ್ನು ಬಾಲ್ಯದಲ್ಲೇ ಕಂಡಿದ್ದವನು.

ನಿಮ್ಮ ಸಮಸ್ಯೆಗೆ ಸ್ಪಂದಿಸುವ ಮಾನವೀಯತೆ ನನಗೂ ಕೂಡ ಇದೆ. ಆದರೆ ಸರ್ಕಾರದ ಅಧೀನ ಅಧಿಕಾರಿಯಾಗಿ ಸರ್ಕಾರದ ನಿರ್ದೇಶನಗಳನ್ನ ಪಾಲಿಸಬೇಕಾಗಿರುತ್ತದೆ. ಅದರಂತೆ ಪ್ರಾಮಾಣಿಕವಾಗಿ ರೈತರಿಗೆ, ಹಾಲು ಉತ್ಪಾದಕರಿಗೆ ನೆರವಾಗುವಂತಹ ಕಾನೂನು ಕ್ರಮಗಳನ್ನು ಗೋಶಾಲೆಯ ವಿಚಾರದಲ್ಲಿ ಹಾಗೂ ಕುಡಿಯುವ ನೀರಿನ ವಿಚಾರದಲ್ಲಿ ಕೈಗೊಂಡಿದ್ದು ತಮ್ಮ ಬೇಡಿಕೆಯಂತೆ ಹಾಲಿಗೆ 10 ರೂ, ಪ್ರೋತ್ಸಾಹ ಧನ ಮತ್ತು ಲೀಟರ್ ಹಾಲಿಗೆ 10 ರೂ. ಹೆಚ್ಚಿಸುವ ನಿಮ್ಮ ಮನವಿಯನ್ನು ಸರ್ಕಾರಕ್ಕೆ ಸಲ್ಲಿಸಿ ಪ್ರಾಮಾಣಿಕವಾಗಿ ನಿಮ್ಮ ಪರವಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ತಕ್ಷಣ ರೈತರೆಲ್ಲ ಚಪ್ಪಾಳೆ ತಟ್ಟಿ ಅಭಿನಂದಿಸಿದರು.

# ಬೆಳಗಿನ 5 ಗಂಟೆಯ ಪರಿಶ್ರಮಕ್ಕೆ ಜಿಲ್ಲಾ ಮಟ್ಟದ ಪ್ರತಿಫಲ



**ತಿಪಟೂರು:** ತಾಲೂಕಿನ ಕಲ್ಪತರು ಕ್ರೀಡಾಂಗಣದಲ್ಲಿ 2026ರ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಹೊಸಳ್ಳಿ ಶಾಲೆ ಶಾಲೆಯ ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಸಾಧನೆ ಮಾಡಿದ್ದಾರೆ.

ಸೌಲಭ್ಯಗಳ ಕೊರತೆಯನ್ನು ಸವಾಲಾಗಿ ಸ್ವೀಕರಿಸಿ, ಕಠಿಣ ಪರಿಶ್ರಮ, ಛಲ ಮತ್ತು ಆತ್ಮವಿಶ್ವಾಸದಿಂದ ಕ್ರೀಡಾ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡುತ್ತಿರುವ ತಿಪಟೂರು ತಾಲೂಕಿನ ಹೊಸಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯರು, 14 ವರ್ಷ ವಯೋಮಿತಿಯ ತ್ರೋಬಾಲ್‌ನಲ್ಲಿ ಸತತ ಮೂರನೇ ಬಾರಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಶಾಲೆಗೆ ಕೀರ್ತಿ ತಂದಿದ್ದಾರೆ.ಇದರ ಜೊತೆಗೆ ಶಾಲೆಯ ವಿದ್ಯಾರ್ಥಿನಿ ಶಾಂಭವಿ H L ಅವರು ಅಥ್ಲೆಟಿಕ್ಸ್ ವಿಭಾಗದಲ್ಲಿಯೂ ಗಮನಾರ್ಹ ಸಾಧನೆ ಮಾಡುವ ಮೂಲಕ ಶಾಲೆಯ ಕ್ರೀಡಾ ಕೀರ್ತಿಗೆ ಮತ್ತೊಂದು ಗರಿ ಮೂಡಿಸಿದ್ದಾರೆ ಗುಂಡು ಎಸೆತದಲ್ಲಿ ಪ್ರಥಮ ಸ್ಥಾನ ಪಡೆದು, ಎತ್ತರ ಜಿಗಿತದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.ತ್ರೋಬಾಲ್‌ನಲ್ಲಿ ಸತತ ಮೂರನೇ ವರ್ಷದ ಸಾಧನೆ 14 ವರ್ಷ ವಯೋಮಿತಿಯ ತ್ರೋಬಾಲ್‌ನಲ್ಲಿ ಹೊಸಹಳ್ಳಿ ಶಾಲೆಯ ಹೆಣ್ಣುಮಕ್ಕಳ ತಂಡವು ಸತತ ಮೂರನೇ ಬಾರಿಗೆ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದೆ. ಶಾಂಭವಿ ಊ ಐ, ಪ್ರಾರ್ಥನಾ, ಕವನ, ತೇಜಸ್ವಿನಿ, ಶುಭಶ್ರೀ, ಶುಭ ಊ ಖ, ಮನುಪ್ರಿಯ, ಶ್ರಾವಣಿ, ನವ್ಯ ಹಾಗೂ ಪ್ರಿಯಾ ಅವರು ತಂಡದ ಸದಸ್ಯರಾಗಿದ್ದಾರೆ. ಈ ಸಾಧನೆ ಕೇವಲ ಒಂದು ವರ್ಷದ ಫಲವಲ್ಲ. ನಿರಂತರ ಮೂರು ವರ್ಷಗಳ ಪರಿಶ್ರಮ, ತಂಡದ ಒಗ್ಗಟ್ಟು,

ಶಿಸ್ತು ಮತ್ತು ಗೆಲ್ಲುವ ಛಲದ ಫಲವಾಗಿದೆ. ಬೆಳಗಿನ 5 ಗಂಟೆಯಿಂದ ಸಂಜೆ 6ರವರೆಗೆ ಮುಖ್ಯ ಶಿಕ್ಷಕರ ಪರಿಶ್ರಮ ಈ ಯಶಸ್ಸಿನ ಹಿಂದೆ ಶಾಲೆಯ ಮುಖ್ಯ ಶಿಕ್ಷಕರಾದ ಭರತ್ ಪಾಟೀಲ್ ಃ ಖ ಅವರ ನಿರಂತರ ಕಾಳಜಿ ಮತ್ತು ಪ್ರೋತ್ಸಾಹವೂ ಮಹತ್ವದ್ದಾಗಿದೆ. ತರಬೇತಿ ತಂಡದ ಸಾಧನೆಯಲ್ಲಿ ಕೋಚ್ ಪ್ರತಾಪ್ ಅವರ ಪಾತ್ರವೂ ಪ್ರಮುಖವಾಗಿದೆ.

ವಿದ್ಯಾರ್ಥಿನಿಯರ ಸಾಧನೆಗೆ ಶಾಲೆಯ ಶಿಕ್ಷಕರಾದ ಪುಷ್ಪಾವತಿ ಊ ಖ, ರೇಷ್ಮಾ ಭಾನು ಏ ಖ ಹಾಗೂ ಅತಿಥಿ ಶಿಕ್ಷಕರಾದ ಗಾನವಿ ಅವರು ಸಂತಸ ವ್ಯಕ್ತಪಡಿಸಿ ವಿದ್ಯಾರ್ಥಿನಿಯರನ್ನು ಅಭಿನಂದಿಸಿದ್ದಾರೆ. ಪೋಷಕರು, ಹಿರಿಯ ವಿದ್ಯಾರ್ಥಿ ಸಂಘ ಹಾಗೂ ಖಆಒಅ ಈ ಹೆಮ್ಮೆಯ ಸಾಧನೆಗೆ ಶಾಲೆಯ ಹಿರಿಯ ವಿದ್ಯಾರ್ಥಿ ಸಂಘದ ಸದಸ್ಯರು, ಪೋಷಕರು ಹಾಗೂ ಖಆಒಅ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.

# 77 ಹಿರಿಯ ನಾಗರೀಕರು ಸೇರಿದಂತೆ 104 ರೈತರ ಪ್ರಕರಣ ಮುಕ್ತಾಯ । ರೈತರಿಗೆ ಸುಮಾರು 5 ಕೋಟಿ 7ಲಕ್ಷಕ್ಕೂ ಹೆಚ್ಚು ಹಣ ಸಂದಾಯ

ರಾಮನಗರ: ಇಲ್ಲಿನ ಲೋಕ ಅದಾಲತ್ ರೈತರ ಪಾಲಿಗೆ ಆಶಾಕಿರಣವಾಗಿ ಹೊರಹೊಮ್ಮಿದ್ದು, ಅನೇಕ ವರ್ಷಗಳಿಂದ ಬಾಕಿ ಇದ್ದ ವಿದ್ಯುತ್ ಪ್ರಸರಣ ಮಾರ್ಗದ (ಪವರ್ ಗ್ರಿಡ್) ಪ್ರಕರಣದಲ್ಲಿ 104ಕ್ಕೂ ಹೆಚ್ಚಿನ ರೈತರು ಪರಿಹಾರ ರೂಪದಲ್ಲಿ ಸುಮಾರು 5,07,56,273 ಹಣವನ್ನು ಪಡೆದಿದ್ದಾರೆ.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಈ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಳ್ಳಲು ವಿದ್ಯುತ್ ಮಾರ್ಗ ಎಳೆದಿದ್ದ ಪವರ್ ಗ್ರಿಡ್ ಎನ್‌ಎಂ ಟ್ರಾನ್ಸ್ ಮಿಷನ್ ಲಿಮಿಟೆಡ್ ಮತ್ತು ಸಂತ್ರಸ್ತ ರೈತರು ಒಪ್ಪಿಗೆ ಸೂಚಿಸಿದ್ದರು. ಜಿಲ್ಲಾ ನ್ಯಾಯಾಧೀಶರು, ವಕೀಲರ ಸಮ್ಮುಖದಲ್ಲಿ ರೈತರು ಹಾಗೂ ಸಂಸ್ಥೆಯ ಪ್ರತಿನಿಧಿಗಳು ರಾಜಿ ಸಂಧಾನ ಮೂಲಕ ಅನೇಕ ವರ್ಷಗಳಿಂದ ಬಾಕಿ ಇದ್ದ ತಮ್ಮ ಪ್ರಕರಣಗಳನ್ನು ಬಗೆಹರಿಸಿಕೊಂಡರು.

ಏನಿದು ಪವರ್ ಗ್ರೀಡ್ : ಹೈ-ವೋಲ್ಟೇಜ್ ಟ್ರಾನ್ಸ್‌ಮಿಷನ್ ಲೈನ್‌ಗಳ ಮೂಲಕ ಹೈ-ವೋಲ್ಟೇಜ್ ವಿದ್ಯುತ್ ಅನ್ನು ದೂರದವರೆಗೆ ಸಾಗಿಸುವ ಮಾರ್ಗವೇ ಪವರ್ ಗ್ರೀಡ್ ಆಗಿದೆ. ಕೇಂದ್ರ ಸರ್ಕಾರ ಸಹಭಾಗಿತ್ವದ ಸಂಸ್ಥೆಯಾದ ಪವರ್ ಗ್ರಿಡ್ ಎನ್‌ಎಂ ಟ್ರಾನ್ಸ್ ಮಿಷನ್ ಲಿಮಿಟೆಡ್ ರೈತರ ಜಮೀನಿನಲ್ಲಿ ವಿದ್ಯುತ್ ಕಂಬ, ಗೋಪುರ ಹಾಗೂ ತಂತಿಗಳನ್ನು ಹಾಕಿ, ರೈತರಿಗೆ ಪರಿಹಾರ ನೀಡಿತ್ತು. ಆದರೆ ನಮಗೆ ಕಡಿಮೆ ಪರಿಹಾರ ಹಣ ನೀಡಲಾಗಿದೆ ಎಂದು ಜಿಲ್ಲಾ ನ್ಯಾಯಾಲಯ ವ್ಯಾಪ್ತಿಯ ವಿವಿಧ ಭಾಗದಲ್ಲಿ ಅನೇಕ ರೈತರು ದಾವೆ ಹೂಡಿದ್ದರು.

ರೈತರ ಮೊರೆ ಏನು : ವಿದ್ಯುತ್ ತಂತಿ ಹಾದು ಹೋಗುವ ಜಮೀನಿನಲ್ಲಿ ಮರಗಳನ್ನು ಬೆಳೆಸುವಂತಿಲ್ಲ, ಮನೆಗಳನ್ನು ಕಟ್ಟಿಕೊಳ್ಳುವಂತಿಲ್ಲ, ಬ್ಯಾಂಕ್ ಲೋನ್ ಪಡೆಯುವುದು ಕಷ್ಟ, ಇದರಿಂದ ನಮಗೆ ಅನಾನುಕೂಲ ಆಗುತ್ತಿದೆ. ಆದರೆ ನಮಗೆ ಕಡಿಮೆ ಪರಿಹಾರ ಕೊಡಲಾಗಿದೆ ಎಂದು ಹಲವು ರೈತರು ಆಕ್ಷೇಪ ವ್ಯಕ್ತಪಡಿಸಿ ಹೆಚ್ಚಿನ ಪರಿಹಾರಕ್ಕಾಗಿ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಹಿರಿಯ ನಾಗರೀಕ ರೈತರ ಪ್ರಕರಣ ಇತ್ಯರ್ಥ : ನಮಗೆ ಹೆಚ್ಚಿನ ಪರಿಹಾರ ಬೇಕು ಎಂದು ನ್ಯಾಯಾಲಯದ ಮೊರೆ ಹೋಗಿದ್ದ 104 ರೈತರ ಪೈಕಿ 77 ಮಂದಿ ಸಂತ್ರಸ್ತ ರೈತರು 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಾಗಿದ್ದರು. ಇವರು ಕಳೆದ ಹಲವಾರು ವರ್ಷದಿಂದ ಪರಿಹಾರಕ್ಕಾಗಿ ನ್ಯಾಯಾಲಯಕ್ಕೆ ಆಗಮಿಸುತ್ತಿದ್ದರು. ಇತ್ತೀಚೆಗೆ ನಡೆದ ಲೋಕ್ ಅದಾಲತ್‌ನಲ್ಲಿ ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಎಂ.ಎಚ್. ಅಣ್ಣಯ್ಯನವರ ಅವರ ಸಮ್ಮುಖದಲ್ಲಿ ನಡೆದ ರಾಜಿ ಸಂಧಾನ ಯಶಸ್ವಿಯಾಗಿದ್ದು, ರೈತರು ಶೇ.35 ರಷ್ಟು ಹೆಚ್ಚಿನ ಪರಿಹಾರ ಪಡೆದುಕೊಂಡರು.

ನ್ಯಾಯಾಧೀಶರಾದ ಎಂ.ಎಚ್. ಅಣ್ಣಯ್ಯನವರ ಅವರು ಮಾತನಾಡಿ, ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ಈ ಬಾರಿ ಹಿರಿಯ ನಾಗರೀಕ ಕಕ್ಷಿದಾರರ ಪ್ರಕರಣಗಳು, ಪವರ್ ಗ್ರಿಡ್ ಮಾರ್ಗದಲ್ಲಿ ಹೆಚ್ಚಿನ ಪರಿಹಾರ ಕೋರಿದ್ದ ರೈತರ ಪ್ರಕರಣಗಳನ್ನು ಆದ್ಯತೆಯ ಮೇರೆಗೆ ಇತ್ಯರ್ಥ ಮಾಡಿದ್ದೇವೆ. ರೈತರಿಗೆ ಶೇ.35 ರಷ್ಟು ಹೆಚ್ಚಿನ ಪರಿಹಾರವನ್ನು ಒದಗಿಸಿದ್ದೇವೆ. ಲೋಕ್ ಅದಾಲತ್‌ನಿಂದ ಸಮಯ, ಖರ್ಚು ಉಳಿತಾಯವಾಗಲಿದೆ. ಪ್ರಕರಣಗಳಿಂದ ಮುಕ್ತಿ ಪಡೆದು ನೆಮ್ಮದಿಯಿಂದ ಜೀವನ ಸಾಗಿಸಬಹುದು. ಸಾರ್ವಜನಿಕರು ಲೋಕ ಅದಾಲತ್‌ಅನ್ನು ಸದುಪಯೋಗ ಪಡೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹಲವು ಪ್ರಕರಣ ಇತ್ಯರ್ಥ : ಪವರ್ ಗ್ರೀಡ್ ಪ್ರಕರಣಗಳಷ್ಟೇ ಅಲ್ಲದೆ ಹಲವು ಪ್ರಕರಣಗಳು ಜಿಲ್ಲಾದ್ಯಂತ ನಡೆದ ಲೋಕ ಅದಾಲತ್‌ನಲ್ಲಿ ಇತ್ಯರ್ಥಗೊಂಡವು.ರಾಮನಗರ, ಚನ್ನಪಟ್ಟಣ, ಕನಕಪುರ ಮತ್ತು ಮಾಗಡಿ ನ್ಯಾಯಾಲಯಗಳು ಸೇರಿದಂತೆ ಒಟ್ಟು 11 ಪೀಠಗಳಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಆಯೋಜಿಸಲಾಗಿತ್ತು.

ಲೋಕ ಅದಾಲತ್‌ಗೆ ಜಿಲ್ಲೆಯಾದ್ಯಂತ 60569 ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಲ್ಲಿ 6463 ಪ್ರಕರಣಗಳು, ಹಾಗೆಯೇ 137874 ವ್ಯಾಜ್ಯ ಪೂರ್ವ ಪ್ರಕರಣಗಳನ್ನು ರಾಜಿ ಸಂದಾನಕ್ಕಾಗಿ ತೆಗೆದುಕೊಳ್ಳಲಾಗಿತ್ತು.

ಈ ಪೈಕಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ 1584 ಪ್ರಕರಣಗಳು ಹಾಗೂ 137777 ವ್ಯಾಜ್ಯ ಪೂರ್ವ ಪ್ರಕರಣಗಳು ಸೇರಿದಂತೆ ಒಟ್ಟು 139361 ಪ್ರಕರಣಗಳನ್ನು ರಾಜಿ ಸಂದಾನದ ಮೂಲಕ ಇತ್ಯರ್ಥಪಡಿಸಲಾಯಿತು.

ಇತ್ಯರ್ಥಗೊಂಡ ಪ್ರಕರಣಗಳು: ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳು–42, ನೆಗೋಷಬಲ್ ಇನ್ಸ್ಟ್ರುಮೆಂಟ್ ಕಾಯಿದೆ ಪ್ರಕರಣಗಳು–92, ಸಾಲ ವಸೂಲಾತಿ ಪ್ರಕರಣಗಳು–07, ಮೋಟಾರು ವಾಹನ ಅಪಘಾತ ಪ್ರಕರಣ–28, ಕಾರ್ಮಿಕ ವಿವಾದ ಪ್ರಕರಣಗಳು–11, ವೈವಾಹಿಕ ಪ್ರಕರಣಗಳು–06, ಭೂಸ್ವಾಧೀನ ಪ್ರಕರಣಗಳು–01, ಆಸ್ತಿ ವಿಭಾಗ ಪ್ರಕರಣಗಳು–84, ನಿರ್ದಿಷ್ಟ ಕಾರ್ಯಕ್ಷಮತೆ ಪ್ರಕರಣಗಳು–26, ಜಾರಿ ಪ್ರಕರಣಗಳು–22, ಮೋಟಾರು ವಾಹನ ಅಪಘಾತ ಜಾರಿ ಪ್ರಕರಣ–21, ಹಕ್ಕು ಘೋಷಣೆ, ಶಾಶ್ವತ ನಿರ್ಬಂದಕಾಜ್ಞೆ ಹಾಗೂ ಇತರೆ–149. ಜನನ ಮತ್ತು ಮರಣ ಪತ್ರಕ್ಕೆ ಸಂಬಂಧಿಸಿದ ಪ್ರಕರಣಗಳು–44, ಲಘು ವ್ಯಾಜ್ಯ ಪ್ರಕರಣಗಳು–893, ಇತರೆ ಕ್ರಿಮಿನಲ್ ಪ್ರಕರಣಗಳು–08, ಬ್ಯಾಂಕ್ ಪ್ರಕರಣಗಳು–07,125 ಸಿಆರ್‌ಪಿಸಿ–05, ಕೌಟುಂಬಿಕ ದೌರ್ಜನ್ಯ ಪ್ರಕರಣಗಳು–04, ಪ್ಲೀ ಬರ್ಗೈನಿಂಗ್–105, ಎಲೆಕ್ಟ್ರಿಕ್ ಬಿಲ್ ಪ್ರಕರಣಗಳು–27, ವ್ಯಾಜ್ಯ ಪೂರ್ವ ಪ್ರಕರಣಗಳು–1,37,777 ಒಟ್ಟು 1,39,361 ಪ್ರಕರಣಗಳನ್ನು ಇತ್ಯರ್ಥಪಡಿಸಲಾಯಿತು.

# ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 74ನೇ ಶಾಖೆಗೆ ಚಾಲನೆ

**ರಾಮನಗರ:** ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಕಳೆದ 18 ವರ್ಷಗಳ ಹಿಂದೆ ಬಾಗಲಕೋಟೆ ಜಿಲ್ಲೆ ಮುಧೋಳದಲ್ಲಿ ಪ್ರಾರಂಭವಾದ ಸಂಸ್ಥೆ ಹಂತ ಹಂತವಾಗಿ ಬೆಳೆದು ಇಂದು 74ನೇ ಶಾಖೆಯನ್ನು ರಾಮನಗರದಲ್ಲಿ ಮತ್ತು ಮೈಸೂರಿನಲ್ಲಿ 75ನೇ ಶಾಖೆಯನ್ನು ಆರಂಭಿಸುತ್ತಿದೆ ಎಂದು ಮಾಜಿ ಸಚಿವ ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಸಂಸ್ಥಾಪಕ ಅಧ್ಯಕ್ಷ ಮುರುಗೇಶ್ ಆರ್. ನಿರಾಣಿ ತಿಳಿಸಿದರು.

ರಾಮನಗರದ ಹಳೆ ಬಸ್ ನಿಲ್ದಾಣ ಸಮೀಪ ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 74ನೇ ಶಾಖೆಗೆ ಚಾಲನೆ ನೀಡಿ ನಂತರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಇಂದು 4 ಸಾವಿರ ಕೋಟಿ ರೂ. ದುಡಿಯುವ ಬಂಡವಾಳವನ್ನು ಹೊಂದಿದ್ದು ಇದುವರೆಗೂ 65 ಸಾವಿರ ಕೋಟಿ ರೂ.ಗಳ ವಹಿವಾಟು ನಡೆಸಲಾಗಿದೆ. ಇದು ಹೆಮ್ಮೆಯ ಸಂಗತಿ ಇಡೀ ರಾಜ್ಯದಲ್ಲಿ ರಾಷ್ಟ್ರೀಯ ಬ್ಯಾಂಕ್‌ಗಳನ್ನು ಬಿಟ್ಟರೆ ನಮ್ಮ ಸಂಘವು ಎರಡನೇ ಸ್ಥಾನದಲ್ಲಿ ಬೆಳೆದಿದೆ. ವಿಜಯ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ರಾಜ್ಯದಲ್ಲಿ ಉತ್ತಮ ಆರ್ಥಿಕ ವಹಿವಾಟು ನಡೆಸುತ್ತಾ ಜನಸ್ನೇಹಿಯಾಗಿ ನಡೆದುಬರುತ್ತಿದೆ.

ನಿಶ್ಚಿತ ಠೇವಣಿ, ಸಾಲ ವಸೂಲಾತಿ ಹಾಗೂ ಸಾಲ ತಿರುವಳಿದಾರರು ಶೇ. 1ರಷ್ಟು ಮಾತ್ರ ಇದ್ದು ವ್ಯವಸ್ಥಿತವಾಗಿ ಸಿಬ್ಬಂದಿವರ್ಗದವರು ಕೆಲಸ ಮಾಡುತ್ತಿದ್ದಾರೆ. ಮೈಸೂರು, ಬೆಂಗಳೂರು, ರಾಮನಗರ ಭಾಗದಲ್ಲಿ ಶಾಖೆಯನ್ನು ತೆರೆಯಲು ಮನವಿ ಬಂದಿತ್ತು. ರೈತರಿಗೆ, ವ್ಯಾಪಾರಸ್ಥರಿಗೆ ಮತ್ತು ಉದ್ಯಮಿಗಳಿಗೆ ಅನುಕೂಲವಾಗಲಿ ಎಂದು ಶಾಖೆಗೆ ಚಾಲನೆ ನೀಡಿದ್ದೇವೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿದಾರರಿಗೆ ಶೇ. 6 ರಿಂದ 7 ರಷ್ಟು ಬಡ್ಡಿದರ ಆದರೆ ನಮ್ಮಲ್ಲಿ 11.5% ರವರೆಗೂ ಬಡ್ಡಿದರ ನೀಡುತ್ತಿದ್ದೇವೆ.

ನಮ್ಮ ಶಾಖೆಯು ನಿಗಧಿತ ಸಮಯದಲ್ಲಿ ಮಾತ್ರ ಕೆಲಸ ನಿರ್ವಹಿಸದೇ ಠೇವಣಿದಾರರು ಮತ್ತು ಉಳಿತಾಯ ಖಾತೆ ಹೊಂದಿರುವವರಿಗೆ ದಿನದ 24 ಗಂಟೆಯ ಯಾವುದೇ ಸಮಯದಲ್ಲಿ ಆಸ್ಪತ್ರೆ, ಶಿಕ್ಷಣಕ್ಕೆ ಅತಿ ಜರೂರಾಗಿ ಹಣದ ಅವಶ್ಯಕತೆ ಇದ್ದರೆ ನಮ್ಮ ಶಾಖೆಯ ವ್ಯವಸ್ಥಾಪಕರು ಖುದ್ದಾಗಿ ಗ್ರಾಹಕರಿಗೆ ಹಣವನ್ನು ಪೂರೈಸುವ ವ್ಯವಸ್ಥೆಯನ್ನು ವಿಜಯ ಸೌಹಾರ್ದ ಸೊಸೈಟಿ ಮಾಡುತ್ತದೆ ಇದು ವಿಶೇಷತೆಯಾಗಿದೆ ಎಂದರು.

ಇದರ ಜೊತೆಗೆ ನಿರಾಣಿ ಗ್ರೂಪ್ ಕೈಗಾರಿಕೆಯಲ್ಲಿ ಸಾಕಷ್ಟು ಸಾಧನೆ ಮಾಡಿದ್ದು, 25 ವರ್ಷಗಳ ಹಿಂದೆ ಪ್ರಾರಂಭ ಮಾಡಿರುವ ಕಾರ್ಖಾನೆಯಲ್ಲಿ ಪ್ರತಿದಿನ 500 ಟನ್‌ಗಳನ್ನು ಕಬ್ಬನ್ನು ಅರಿಯುತ್ತದೆ ಮತ್ತು ದೇಶದಲ್ಲಿ ಇದು ಅತಿ ಚಿಕ್ಕ ಸಕ್ಕರೆ ಕಾರ್ಖಾನೆಯಾಗಿತ್ತು. ಇಂದು ನಿರಾಣಿ ಸಕ್ಕರೆ ಕಾರ್ಖಾನೆ ಇಡೀ ದೇಶದಲ್ಲೆ ಅತಿ ಹೆಚ್ಚು ಸಕ್ಕರೆ ಉತ್ಪಾದನೆ ಮಾಡುತ್ತಿದೆ. ಪ್ರತಿದಿನ 1 ಲಕ್ಷ ಟನ್ ಕಬ್ಬನ್ನು ಅರಿಯುವ ಕಾರ್ಖಾನೆ ಎಂಬ ಹೆಗ್ಗಳಿಕೆ ಗಳಿಸಿದೆ. ಇದರ ಜೊತೆಗೆ 4 ಮೇಘವ್ಯಾಟ್ ವಿದ್ಯುತ್ ಉತ್ಪಾದನೆ ಮತ್ತು 28 ಲಕ್ಷ ಲೀಟರ್ ಇಥನಾಲ್ ಏಷ್ಯಾದಲ್ಲೆ ಅತಿ ಹೆಚ್ಚು ಉತ್ಪಾದನೆ



ಕೀರ್ತಿ ನಿರಾಣಿ ಗ್ರೂಪ್‌ಗೆ ಸಲ್ಲುತ್ತದೆ.

ಸಿ.ಎನ್.ಜಿ. 140 ಟನ್ ಪ್ರತಿದಿನ 14 ಕಾರ್ಖಾನೆಗಳಲ್ಲಿ ಉತ್ಪಾದಿಸುತ್ತಿದ್ದೇವೆ. ಇದರ ಜೊತೆಗೆ ಬರುವ ಎರಡು ವರ್ಷದಲ್ಲಿ ಬಯೋ ಪ್ಲಾಸ್ಟಿಕ್‌ನ್ನು ಎವಿಎಸ್‌ಪಿವಿಎಲ್ ವಿಮಾನಗಳಿಗೆ ಉಪಯೋಗಿಸುವ ಪೆಟ್ರೋಲ್ ಅನ್ನು ರೈತರು ಬೆಳೆದಿರುವ ವಸ್ತುಗಳಿಂದ ನಾವು ತಯಾರು ಮಾಡುತ್ತಿದ್ದೇವೆ. ರಾಮನಗರ, ಮಂಡ್ಯ, ಮೈಸೂರಿನಲ್ಲಿ ರೈತರು ಬೆಳೆಯುತ್ತಿರುವ ಕಬ್ಬು, ಮೆಕ್ಕೆಜೋಳ, ಅಕ್ಕಿಗೆ ಉತ್ತಮ ಬೆಲೆ ಬರುತ್ತಿದ್ದು ರೈತರ ಆರ್ಥಿಕ ಮಟ್ಟ ಹೆಚ್ಚಲು ಪ್ರಮುಖವಾದ ಕಾರಣವಾಗಿದೆ. ಇದರ ಕಡೆಗೂ ನಮ್ಮ ಆಸಕ್ತಿ ವಹಿಸುತ್ತಿದ್ದು, ಬರುವ ದಿನಗಳಲ್ಲಿ ಬಯೋಪ್ಲಾಸ್ಟಿಕ್ ಮತ್ತು ಎವಿಎಸ್‌ಪಿವಿಎಲ್ ಆಯಿಲ್ ಉದ್ಯಮ ಮಹಾರಾಷ್ಟ್ರ, ಆಂಧ್ರ, ಕರ್ನಾಟಕ ಮತ್ತು ಬಿಹಾರ ರಾಜ್ಯಗಳಿಗೆ ಬರುತ್ತಿದೆ.

ಒಟ್ಟಾರೆ ಕರ್ನಾಟಕ ರಾಜ್ಯದಲ್ಲಿ ನಿರಾಣಿ ಗ್ರೂಪ್‌ನಿಂದ ಸಿಮೆಂಟ್, ಸಕ್ಕರೆ, ಡಿಸ್ಟಿಲರಿ ಕಾರ್ಖಾನೆ, ಶಿಕ್ಷಣ ಸಂಸ್ಥೆಗಳಲ್ಲಿ 72 ಸಾವಿರ ಜನರಿಗೆ ಉದ್ಯೋಗ ನೀಡಿದ್ದೇವೆ. ರಾಮನಗರ ಭಾಗದ ಉದ್ಯಮದಾರರು, ರೈತರು, ವ್ಯಾಪಾರಸ್ಥರು ನಮ್ಮ ಬ್ಯಾಂಕಿನಲ್ಲಿ ಎಲ್ಲ ರೀತಿಯ ಸವಲತ್ತುಗಳನ್ನು ಉಪಯೋಗಿಸಿಕೊಳ್ಳಬಹುದು. ಠೇವಣಿ ಇಡುವುದು, ಸಾಲ ವಿತರಣೆ ಇರಬಹುದು. ಸಾಲ ಪಡೆದವರು ಸಮಯಕ್ಕೆ ಸರಿಯಾಗಿ ತಿರುವಳಿ ಮಾಡಿದರೆ ಹೊಸಬರಿಗೆ ಸಾಲ ನೀಡಲು ಅನುಕೂಲವಾಗುತ್ತದೆ. ಆದುದರಿಂದ ಇಂದು ನಗರದಲ್ಲಿ ಆರಂಭದ ಹೆಜ್ಜೆ ಇಟ್ಟಿರುವ ವಿಜಯ ಸೌಹಾರ್ದ ಸೊಸೈಟಿಯ ಸೇವೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದು ಮನವಿ ಮಾಡಿದರು.

ಮಾಜಿ ಸಚಿವ ಬಿ.ಸಿ. ಪಾಟೀಲ್ ಮಾತನಾಡಿ ಸರ್ಕಾರದ ಖಜಾನೆ ಖಾಲಿಯಾಗಿದ್ದರೂ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜನರಿಗೆ ಸುಳ್ಳು ಆಶ್ವಾಸನೆ ನೀಡುತ್ತಿದ್ದಾರೆ. ಇವರಿಗೆ ರೈತರ ಬಗ್ಗೆ ಕಾಳಜಿ ಇಲ್ಲ ಎಂದು ದೂರಿದರು.

ಮೇಲಣಗವಿಮಠ, ಶಿವಗಂಗೆ ಮಠಾಧ್ಯಕ್ಷರಾದ ಶ್ರೀ ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಸಹಕಾರ ಸಂಘಗಳಿಗೆ ಗ್ರಾಹಕರೇ ಅಡಿಪಾಯವಾಗಿದ್ದು, ಪಡೆದ ಸಾಲವನ್ನು ಸಮಯಕ್ಕೆ ಮರುಪಾವತಿ ಮಾಡಿದಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ. ಗ್ರಾಹಕರ ಆರ್ಥಿಕ ಸಹಕಾರವೇ ಸೊಸೈಟಿಯ ಅಭಿವೃದ್ಧಿಗೆ ಬುನಾದಿ ಈ ಭಾಗದಲ್ಲಿ ಸೊಸೈಟಿ ಅವಶ್ಯಕತೆ ಇತ್ತು ಜನರು ಸೊಸೈಟಿಯ ಲಾಭ ಪಡೆದು ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಬಳಸಿಕೊಳ್ಳಿ ಸೊಸೈಟಿಯ ಸೇವೆ ನಿಮ್ಮದಾಗಿಸಿಕೊಳ್ಳಿ ಎಂದರು.

ಬಿಜೆಪಿಯ ರಾಜ್ಯದಲ್ಲಿ ಯಾವ ಭಾಗದಲ್ಲಿ ಸದೃಢವಾಗಿದೆ ಅಲ್ಲಿ ಕಾಂಗ್ರೆಸ್ ಸುಳ್ಳು ಆಶ್ವಾಸನೆಗಳನ್ನು ನೀಡಿ ಘೋಷಣೆ ಮಾಡುತ್ತಿದೆ. ಮಂಗಳೂರು ಕರಾವಳಿ ಪ್ರದೇಶ, ಉತ್ತರ ಕರ್ನಾಟಕ ಪ್ರದೇಶಗಳು ಬಿಜೆಪಿ ಭದ್ರಕೋಟೆಯಾಗಿದೆ. ಅಲ್ಲಿ ಹಣವೇ ಲಭ್ಯವಾಗುತ್ತಿಲ್ಲ. ಸಿದ್ದರಾಮಯ್ಯ ಅವರಿಗೆ ರಾಜಕೀಯ ಮರುಜೀವ ಕೊಟ್ಟಿರುವುದು ಬಾಗಲಕೋಟೆ ಜಿಲ್ಲೆ ಬಾದಾಮಿ ತಾಲ್ಲೂಕು. ಅಲ್ಲಿ ಬಿಜೆಪಿ ಸರ್ಕಾರವಿದ್ದಾಗ ಐದು ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿತ್ತು.

ಸರ್ಕಾರದಿಂದ ಹಣವು ಬಿಡುಗಡೆಯಾಗಿ ಯೋಜನೆಯು ಪೂರ್ಣಗೊಂಡಿತು. ಆದರೆ ಇವರು ಐದು ವರ್ಷಗಳ ಕಾಲ ವಿರೋಧ ಪಕ್ಷದ ನಾಯಕರಾಗಿದ್ದರು ಮತ್ತು ಎಂಟು ವರ್ಷ ಮುಖ್ಯಮಂತ್ರಿಯಾಗಿದ್ದರು ಒಂದು ರೂಪಾಯಿ ಬಿಡುಗಡೆಮಾಡಲಿಲ್ಲ. ತಾವು ಮುಖ್ಯಮಂತ್ರಿಯಾಗಲು ಕಾರಣವಾದ ಬಾಗಲಕೋಟೆಗೆ ಹಣ ಮಂಜೂರು ಮಾಡಲಿಲ್ಲ ಎಂದ ಮೇಲೆ ಹೊಸದಾಗಿ ಘೋಷಣೆ ಮಾಡಿಕೊಂಡು ಹೋಗುತ್ತಿದ್ದು, ಯಾವುದೇ ಹಣ ಇವರಲ್ಲಿ ಇಲ್ಲ. ಐದು ಗ್ಯಾರಂಟಿ ಯೋಜನೆಗಳನ್ನು ಘೋಷಣೆ ಮಾಡಿದ್ದು, ಪ್ರತಿತಿಂಗಳು ಹಣ ಬಿಡುಗಡೆಯಾಗುತ್ತಿಲ್ಲ.

ಪ್ರತಿ ಎರಡು, ಮೂರು, ಐದು ತಿಂಗಳಿಗೊಮ್ಮೆ ಹಣ ಬಿಡುಗಡೆಯಾಗುತ್ತಿದೆ. ಹಾಲಿಗೆ ನೀಡುತ್ತಿರುವ ಸಬ್ಸಿಡಿ ಹಣವೂ ಬಿಡುಗಡೆಯಾಗಿಲ್ಲ. ಹಳೆಯ ಭರವಸೆಗಳೇ ಅರ್ಧಕ್ಕೆ ನಿಂತುಹೋಗಿದ್ದು, ಹೊಸ ಆಶ್ವಾಸನೆಗಳನ್ನು ಘೋಷಣೆ ಮಾಡುವುದರಿಂದ ಯಾವುದೇ ಪ್ರಯೋಜನವು ಇಲ್ಲ. ರಾಜ್ಯದಲ್ಲಿ ಈ ವರ್ಷ ಮಳೆ ಇಲ್ಲ. ಒಂದು ಕಣ್ಣಿಗೆ ಸುಣ್ಣ ಮತ್ತೊಂದು ಕಣ್ಣಿಗೆ ಸುಣ್ಣದಂತೆ ಮಾಡದೇ ಒಟ್ಟಾರೆ ಎಲ್ಲಾ 224 ಕ್ಷೇತ್ರಗಳನ್ನು ಬರಪೀಡಿತ ಪ್ರದೇಶವೆಂದು ಸರ್ಕಾರ ಕೂಡಲೇ ಘೋಷಣೆ ಮಾಡಬೇಕು. ಎಚ್.ಕೆ. ಪಾಟೀಲರು ರಾಜೀನಾಮೆ ನೀಡುತ್ತೇನೆ ಎಂದರೆ ಅವರ ತಾಲ್ಲೂಕು ಬರಪೀಡಿತ ಎಂದು ಘೋಷಣೆ ಮಾಡುವುದು ಸರಿಯಲ್ಲ ಎಂದು ಕಾಂಗ್ರೆಸ್ ಸರ್ಕಾರದ ಆಡಳಿತದ ಬಗ್ಗೆ ಮಾಜಿ ಸಚಿವ ಮುರುಗೇಶ್ ಆರ್. ನಿರಾಣಿ ಕಿಡಿ ಕಾರಿದರು.

ಬೇವೂರು ಮಠಾಧ್ಯಕ್ಷರಾದ ಶ್ರೀ ಮೃತ್ಯುಂಜಯ ಶಿವಾಚಾರ್ಯ ಸ್ವಾಮೀಜಿ, ವಿಶ್ವ ವೀರಶೈವ ಲಿಂಗಾಯಿತ ಒಕ್ಕೂಟ ಜಿಲ್ಲಾಧ್ಯಕ್ಷ ಪೋಲೀಸ್ ರುದ್ರೇಶ್, ಕರ್ನಾಟಕ ನವನಿರ್ಮಾಣ ಸೇನೆ ರಾಜ್ಯಾಧ್ಯಕ್ಷ ಭೀಮಾಶಂಕರ್ ಪಾಟೀಲ್, ವೈದ್ಯೆ

# ಬಿಡದಿ ಪುರಸಭೆಗೆ ಅಧ್ಯಕ್ಷರಾಗಿ ಯಲ್ಲಮ್ಮ ಆಯ್ಕೆ

**ರಾಮನಗರ:** ಬಿಡದಿ ಪುರಸಭೆಯ ನೂತನ ಅಧ್ಯಕ್ಷರಾಗಿ ವಾರ್ಡ್?20ರ ಜೆಡಿಎಸ್ ಸದಸ್ಯೆ ಯಲ್ಲಮ್ಮ ನರಸಿಂಹಮೂರ್ತಿ ಅವಿರೋಧವಾಗಿ ಆಯ್ಕೆಯಾದರು.



ಇತ್ತೀಚೆಗೆ ಪುರಸಭೆ ಅಧ್ಯಕ್ಷೆ ಭಾನುಪ್ರಿಯಾ ಸಂಪತ್ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಿಗದಿಯಾಗಿತ್ತು. ಪರಿಶಿಷ್ಟ ಜಾತಿಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಯಲ್ಲಮ್ಮ ನರಸಿಂಹಮೂರ್ತಿ ನಾಮಪತ್ರ ಸಲ್ಲಿಸಿದ್ದರು. ಕಾಂಗ್ರೆಸ್‌ನಿಂದ ಯಾರು ಸಹ ನಾಮಪತ್ರ ಸಲ್ಲಿಸಿದ ಕಾರಣ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ ತಹಶೀಲ್ದಾರ್ ತೇಜಸ್ವಿನಿ ಯಲ್ಲಮ್ಮ ಅವರು ಅಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಘೋಷಿಸಿದರು.

ನೂತನ ಅಧ್ಯಕ್ಷರ ಅವಿರೋಧ ಆಯ್ಕೆ ಪ್ರಕಟಗೊಳ್ಳುತ್ತಿದ್ದಂತೆ ಪುರಸಭೆ ಮುಂಭಾಗ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಈ ವೇಳೆ ನೂತನ ಅಧ್ಯಕ್ಷೆ ಯಲ್ಲಮ್ಮ ನರಸಿಂಹಮೂರ್ತಿ ಮಾತನಾಡಿ, ತಮ್ಮನ್ನು ಅಧ್ಯಕ್ಷರಾಗಿ ಆಯ್ಕೆ ಮಾಡಿದ ಜೆಡಿಎಸ್ ವರಿಷ್ಠ ನಾಯಕ, ಕೇಂದ್ರಸಚಿವ ಹೆಚ್.ಡಿ.ಕುಮಾರಸ್ವಾಮಿ, ಯುವ ನಾಯಕ ನಿಖಿಲ್ ಕುಮಾರಸ್ವಾಮಿ, ಮಾಜಿ ಶಾಸಕ ಎ.ಮಂಜುನಾಥ್ ಸೇರಿದಂತೆ ಪಕ್ಷದ ಮುಖಂಡರಿಗೂ, ಪುರಸಭೆಯ ಸದಸ್ಯರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಬಿಡದಿ ಕೈಗಾರಿಕಾ ವಸಾಹತು ಪ್ರದೇಶವಾಗಿದ್ದು ಪಟ್ಟಣ ವೇಗವಾಗಿ ಬೆಳೆಯುತ್ತಿದೆ. ಈ ನಿಟ್ಟಿನಲ್ಲಿ ಕುಡಿಯುವ ನೀರು, ಸ್ವಚ್ಛತೆ ಸಹಿತ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದು. ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾರ್ಯ ನಿರ್ವಹಿಸಲಾಗುವುದು ಎಂದರು.

ಮಾಜಿ ಶಾಸಕ ಎ.ಮಂಜುನಾಥ್ ಮಾತನಾಡಿ, ಅಧ್ಯಕ್ಷರ ಅವಧಿ ಒಡಂಬಡಿಕೆಯಂತೆ ಇಂದು ಯಲ್ಲಮ್ಮ ನರಸಿಂಹಮೂರ್ತಿ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ. ಆಯ್ಕೆ ಮಾಡಿದ ಜೆಡಿಎಸ್‌ನ ಎಲ್ಲಾ ಪುರಸಭಾ ಸದಸ್ಯರಿಗೆ ನನ್ನ ಅಭಿನಂದನೆಗಳನ್ನು ತಿಳಿಸುತ್ತೇನೆ. ಯಲ್ಲಮ್ಮ ಅವರು ತಮ್ಮ ಅಧ್ಯಕ್ಷ ಅವಧಿಯಲ್ಲಿ ಪಟ್ಟಣದ ಪುರೋಭಿವೃದ್ಧಿಗೆ ಹೆಚ್ಚು ಒತ್ತುಕೊಟ್ಟು ಕೆಲಸ ಮಾಡಲಿ ಎಂದು ನೂತನ ಅಧ್ಯಕ್ಷರಿಗೆ ಶುಭ ಹಾರೈಸಿದರು. ಪಕ್ಷದ ವರಿಷ್ಠರಾದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ನಿಖಿಲ್ ಕುಮಾರಸ್ವಾಮಿ ಅವರ ಮಾರ್ಗದರ್ಶನದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಶೀರ್ವಾದದೊಂದಿಗೆ ಅತಿ ಹೆಚ್ಚು ಸದಸ್ಯರನ್ನು ಕಳೆದ ಚುನಾವಣೆಯಲ್ಲಿ ಬಿಡದಿ ಜನತೆ ಗೆಲ್ಲಿಸಿಕೊಟ್ಟಿದ್ದರು. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಬಿಡದಿ ಪಟ್ಟಣವು ಅನೇಕ ಸಮಸ್ಯೆಗಳಿಂದ ಕೂಡಿತ್ತು. 23 ವಾರ್ಡುಗಳಿಗೆ ಯುಜಿಡಿ ಸೌಲಭ್ಯವಿರಲಿಲ್ಲ. 24 ತಾಸು ಕಾವೇರಿ ನೀರು, ಯುಜಿಡಿ, ಕೇಬಲ್ ಮತ್ತು ಗ್ಯಾಸ್‌ಲೈನ್ ಸಂಪರ್ಕವನ್ನು ನನ್ನ ಶಾಸಕ ಅವಧಿಯಲ್ಲಿ ಹೆಚ್?ಡಿಕೆ ಅವರು ಮುಖ್ಯಮಂತ್ರಿಗಳಾಗಿದ್ದಾಗ ಮಂಜೂರು ಮಾಡಿಸಲಾಗಿತ್ತು ಎಂದರು.

ಬಿಡದಿ ಪಟ್ಟಣದ ಸಮಗ್ರ ಅಭಿವೃದ್ಧಿ ಅನುದಾನದ ಜೊತೆಗೆ ಹೆಚ್ಚುವರಿ 10 ಕೋಟಿ ಅನುದಾನವನ್ನು ಹೆಚ್?ಡಿಕೆ ಮಂಜೂರು ಮಾಡಿದ್ದರು. ಸ್ಲಂಬೋರ್ಡಿನಿಂದ 500 ಮನೆಗಳನ್ನು ನೀಡಲಾಗಿತ್ತು. ಬಿಡದಿ ಪಟ್ಟಣದ ಅಭಿವೃದ್ಧಿ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿದ್ದು, ಶೀಘ್ರವಾಗಿ ಕಾಮಗಾರಿ ಮುಗಿಸಬೇಕೆಂದು ಕಾಂಗ್ರೆಸ್‌ನ ನಾಯಕರು ಸರ್ಕಾರಿಂದ ವಿಶೇಷ ಅನುದಾನ ತಂದಿದ್ದಾರೆ. ಪಟ್ಟಣದ ಸಮಗ್ರ ಅಭಿವೃದ್ಧಿಗಾಗಿ ಪುರಸಭಾ ಸದಸ್ಯರೆಲ್ಲರ ಬೆಂಬಲ ಸದಾ ಇರುತ್ತದೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಎಚ್.ಸಿ.ಜಯಮುತ್ತು, ತಾಲ್ಲೂಕು ಅಧ್ಯಕ್ಷ ಸಬ್ಬಗೆರೆ ಶಿವಲಿಂಗಯ್ಯ, ಬಿಡದಿ ಪುರಸಭೆ ಮಾಜಿ ಅಧ್ಯಕ್ಷರಾದ ಹರಿಪ್ರಸಾದ್, ಭಾನುಪ್ರಿಯಾ ಸಂಪತ್, ಉಪಾಧ್ಯಕ್ಷೆ ಆಯಿಷಾ ಖಲೀಲ್, ಸ್ಥಾಯಿ ಸಮಿತಿ ಅಧ್ಯಕ್ಷ ದೇವರಾಜು, ಸದಸ್ಯರಾದ ರಾಕೇಶ್, ಹೆಚ್.ಎಸ್.ಲೋಹಿತ್ ಕುಮಾರ್, ರಮೇಶ್, ಸೋಮಶೇಖರ್, ಲಲಿತಾ ನರಸಿಂಹಯ್ಯ, ಮನು ಲೋಕೇಶ್, ಮಂಜುಳಾ ಗೋವಿಂದಪ್ಪ, ಸರಸ್ವತಿ ಬಸವರಾಜು, ಹೆಗ್ಗಡೆಗೆರೆ ನಾಗರಾಜು, ಮುಖಂಡರಾದ ಅಬ್ಬನಕುಪ್ಪೆ ಚಂದ್ರು, ವಾಲಿ ರಮೇಶ್, ಚಿಕ್ಕಣ್ಣಯ್ಯ, ಎಚ್. ಎಲ್.ಚಂದ್ರು, ನರಸಿಂಹಯ್ಯ, ಖಲೀಲ್, ಗುರುಮೂರ್ತಿ, ಬಾನಂದೂರು ಪಾಪಣ್ಣ, ಛತ್ರ ಪಾಂಡು ಸೇರಿದಂತೆ ಹಲವರು ನೂತನ ಅಧ್ಯಕ್ಷರಿಗೆ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.

# ಸುಮ್ಮನೆ ಫೋಟೋ ಹಿಡಿದುಕೊಂಡು ತಿರುಗಾಡೋರೆಲ್ಲಾ ಅಂಬೇಡ್ಕರ್ ವಾದಿಗಳಾಗಲ್ಲ: ಚೇತನ್ ಅಹಿಂಸಾ ಆಕ್ರೋಶ

**ಬೆಂಗಳೂರು:** ಬಾಬಾ ಸಾಹೇಬ್ ಅಂಬೇಡ್ಕರ್ ಬಗ್ಗೆ ನಿಮಗೆ ಏನು ಗೊತ್ತಿಲ್ಲ. ಮೊದಲು ಅಂಬೇಡ್ಕರ್ ಬಗ್ಗೆ ಓದಿಕೊಳ್ಳಿ ಎಂದು ದಲಿತ ಸಮುದಾಯದ ವಿರುದ್ಧ ಅವಹೇಳನಕಾರಿ ಭಾಷಣ ಮಾಡಿದ್ದಾರೆ ಎಂದು ಆರೋಪಿ ಅವರ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸಲಾಗಿದೆ. ಇದರ ಬೆನ್ನಲ್ಲೇ ನಟ ಹಾಗೂ ಸಾಮಾಜಿಕ ಹೋರಾಟಗಾರ ಚೇತನ್ ಅಹಿಂಸಾ ಫೋಟೋ ಹಿಡಿದುಕೊಂಡಾಕ್ಷಣ ಅವರೆಲ್ಲಾ ಅಂಬೇಡ್ಕರ್ ವಾದಿಗಳಾಗಲ್ಲ ಎಂದು ಹೇಳಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಚೇತನ್ ಅಹಿಂಸಾ, ಇವಾಗೆಲ್ಲ ಸುಲಭವಾಗಿ ಬಾಬಾ ಸಾಹೇಬ್ ಅಂಬೇಡ್ಕರ್ ಫೋಟೋವನ್ನು ಎಲ್ಲರೂ ಇಟ್ಟುಕೊಳ್ಳುತ್ತಾರೆ. ಆದರೆ ಬಾಬಾ ಸಾಹೇಬರನ್ನು ಓದಿಲ್ಲ. ಅವರ ವಿಚಾರವನ್ನು ತಿಳಿದುಕೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಂಬೇಡ್ಕರ್ ಅವರನ್ನ ಒಂದು ಜಾತಿಗೆ ಸೀಮಿತ ಮಾಡೋಕಾಗಲ್ಲ. ಆದರೆ ಅವರ ವಿಚಾರವನ್ನು ಒಂದು ಸಿದ್ಧಾಂತಕ್ಕೆ ಅನುಗುಣವಾಗಿ ತರಬಹುದು. ರೈಟ್ ವಿಂಗ್ ಅನ್ನೋಂದು ಅಂಬೇಡ್ಕರ್ ವಾದಿಗಳಲ್ಲ. ಲೆಫ್ಟ್ ವಿಂಗ್, ಕಮ್ಯೂನಿಸ್ಟರು ಅಂಬೇಡ್ಕರ್ ವಾದಿಗಳಲ್ಲ. ಮಧ್ಯಪಂಥಿ



ಮನುವಾದಿಗಳು, ನಮ್ಮ ಸರ್ಕಾರ, ಕಾಂಗ್ರೆಸ್, ಜೆಡಿಎಸ್, ಜೆಡಿಯು ಇವರೂ ಅಂಬೇಡ್ಕರ್ ವಾದಿಗಳಲ್ಲ ಎಂದು ಹೇಳಿದರು.

ಗಣಪತಿ ಮೆರವಣಿಗೆ ವಿಚಾರಕ್ಕೆ ಧಮ್ಕಿ ಹಾಕಿದ್ದ ಇನ್ಸ್‌ಪೆಕ್ಟರ್ ಧನಂಜಯ್‌ಗೆ ಮತ್ತೊಂದು ಸಂಕಷ್ಟ: ಪೊಲೀಸ್ ವರಿಷ್ಠಾಧಿಕಾರಿಗೆ ದೂರು ಯಾರಾದರೂ ನಿಜವಾದ ಅಂಬೇಡ್ಕರ್ ವಿಚಾರಗಳ ಮುಖಾಂತರ ಉತ್ತಮ ಸಮಾಜ ಕಟ್ಟುದ್ದಿದ್ದಾರೆ. ಅಂದರೆ ಅದು ನಮ್ಮ ಸತ್ಯಪಂಥ ಸಮಾನತವಾದಿಗಳು ಮಾತ್ರ, ನೀವುಗಳು ಫೋಟೋ ಇಟ್ಕೋಡಾಕ್ಷಣ ನೀವು ಒಂದು ರೀತಿ ಅಂಬೇಡ್ಕರ್ ವಾದಿಗಳು ಅಂತ ನಾವು ನೋಡಲ್ಲ. ನೀವು ಪುತ್ಥಳಿ ಕಟ್ಟಿದಾಕ್ಷಣ ಅಥವಾ ಪುತ್ಥಳಿಗೆ ಹೂವಿನ ಹಾರ ಹಾಕಿದಾಕ್ಷಣ ಜನರಿಗೆ ಅಥವಾ ಸಮಾಜಕ್ಕೆ ಒಳ್ಳೆದಾಗುತ್ತೆ ಅಂತ ನಾವು ಭಾವಿಸಲ್ಲ. ಬಾಬಾ ಸಾಹೇಬರ ವಿಚಾರಗಳು ಬೇಕು. ಅವರ ವಿಷನ್ ಬೇಕು. ಅವರ ಕನಸನ್ನ ನನಸು ಮಾಡಬೇಕು. ಆ ಕನಸೆ ಒಂದು ಸಮ ಸಮಾಜ. ಆ ದಿಕ್ಕಿನಲ್ಲೇ ನಾವು ಕೆಲಸ ಮಾಡ್ತೀವಿ. ಜನರ ಮುಂದೆ ಜಾಗೃತಿ ಮುಖಾಂತರ, ಹೋರಾಟದ ಮುಖಾಂತರ, ಸೇವೆ ಮುಖಾಂತರ ಪಕ್ಷ ಸಂಘಟನೆ ಮಾಡಿ. ಒಂದು ಬಲಿಷ್ಠವಾದ ಪರ್ಯಾಯ, ಪರಿಹಾರ, ಪರಿವರ್ತನೆ ತರುವುದೇ ನಮ್ಮ ಗುರಿ ಎಂದು ಚೇತನ್ ಅಹಿಂಸಾ ಹೇಳಿದ್ದಾರೆ. ಈ ಹಿಂದೆ ಪ್ರತಾಪ್ ಸಿಂಹ ಅವರು ತಮ್ಮ ಭಾಷಣದಲ್ಲಿ, ನೀವು ಕೇವಲ ನೀಲಿ ಶಾಲು ಹೊದ್ದು ಉದರ ನಿಮಿತ್ತವಾಗಿ ಬಂದು ನಿಲ್ಲುತ್ತೀರಿ, ನಿಮಗೆ ಅಂಬೇಡ್ಕರ್ ಅವರ ಬಗ್ಗೆ ಏನೂ ಗೊತ್ತಿಲ್ಲ, ಮೊದಲು ಅಂಬೇಡ್ಕರ್ ಓದಿ ಎಂದು ಸಾರ್ವಜನಿಕವಾಗಿ ನಿಂದಿಸಿದ್ದಾರೆ. ಅಲ್ಲದೆ, ಶೋಷಿತರ ಹಕ್ಕುಗಳಿಗಾಗಿ ಹೋರಾಡುವ ಸಂಘಟನೆಯ ಪದಾಧಿಕಾರಿಗಳನ್ನು ಹಣಕ್ಕಾಗಿ ಹಾಗೂ ವೈಯಕ್ತಿಕ ಲಾಭಕ್ಕಾಗಿ ಹೋರಾಟ ಮಾಡುವವರು ಎಂದು ಸುಳ್ಳು ಆರೋಪ ಹೊರಿಸಿ ಜಾತಿನಿಂದನೆ ಮಾಡಿದ್ದಾರೆ ಎಂದು ದೂರಲಾಗಿದೆ

## ಕೆಪಿಎಸ್‌ಸಿಯನ್ನೆ ಮುಚ್ಚುವ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ: ಸಿಎಂ ಡಿ.ಕೆ ಶಿವಕುಮಾರ್ ಅಚ್ಚರಿಯ ಮಾತು

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ದಲ್ಲಿನ ಪಶುವೈದ್ಯಾಧಿಕಾರಿಗಳ ನೇಮಕಾತಿ ಅಕ್ರಮಗಳ ಕುರಿತು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಪೊಲೀಸ್ ತನಿಖೆ ಈಗಾಗಲೇ ನಡೆಯುತ್ತಿದೆ ಎಂದು ಅವರು ತಿಳಿಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ಅಕ್ರಮದಲ್ಲಿ ಶಾಮೀಲಾದ ಹಲವರನ್ನು ಈಗಾಗಲೇ ಗುರುತಿಸಲಾಗಿದೆ. ಪ್ರಕರಣದ ತನಿಖೆಗೆ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆಗೆ ಆಕ್ಷೇಪವಿಲ್ಲ ಎಂದರು. ಆದರೆ, ಅಧಿಕಾರಿಗಳ ನೇಮಕದಲ್ಲಿ ಹೊರಗಿನವರ ಹಸ್ತಕ್ಷೇಪದ ಬಗ್ಗೆ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಬಿಟ್ಟ ವಿಚಾರದಲ್ಲಿ ಇತರರ ಪಾತ್ರದ ಕುರಿತು ಕಾನೂನು ಪರಿಶೀಲನೆ ನಡೆಸಲಾಗುತ್ತಿದೆ ಎಂದರು. ಅದೆಷ್ಟೋ ಅಭ್ಯರ್ಥಿಗಳ ಕಠಿಣ ಶ್ರಮ–ನಿರಂತರ ಪ್ರಯತ್ನಕ್ಕೆ ಅನ್ಯಾಯವಾಗಿದ್ದು, ಕೆಪಿಎಸ್‌ಸಿ ಬೇಕಾ ಅನ್ನೋ ಚರ್ಚೆ ಎದ್ದಿದೆ. ಇದರ ನಡುವೆಯೇ ಕೆಪಿಎಸ್‌ಸಿ ಕಚೇರಿಗೆ ಬೀಗ ಹಾಕುವ ಬಗ್ಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಮಹತ್ವದ ಹೇಳಿಕೆ ನೀಡಿದ್ದಾರೆ. KPSC ವಿರುದ್ಧ ಸಾಲು ಸಾಲು ಆರೋಪಗಳು ಕೇಳಿ ಬರ್ತಿದೆ. ಹೀಗಾಗಿ ಸರ್ಕಾರ ಮಹತ್ವದ ಚಿಂತನೆ ನಡೆಸಿದೆ. ಈ ಕುರಿತ ಮಾಧ್ಯಮಗಳ ಜೊತೆ ಮಾತಾಡಿದ ಸಿಎಂ ಡಿಕೆ ಶಿವಕುಮಾರ್ ಅವ್ರು, ಕೆಪಿಎಸ್?ಸಿ ಕಚೇರಿಯನ್ನೇ ಮುಚ್ಚುವ ಬಗ್ಗೆ ಯೋಚನೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಲೀಗಲ್ ಆಗಿ ಚಿಂತನೆ ಮಾಡಿದ್ದು, ನಾವು ನಂಬಿಕೆ ಮೇಲೆ ನೇಮಕ ಮಾಡಿರುತ್ತೇವೆ. ಅಧಿಕಾರಿಗಳೇ ಹೀಗೆ ಮಾಡಿದ್ರೆ ಹೇಗೆ? ಈ ರೀತಿ ಅಕ್ರಮಗಳು ಆದಾಗ ಮಕ್ಕಳ ಭವಿಷ್ಯಕ್ಕೆ ಸಮಸ್ಯೆ ಆಗುತ್ತೆ. ಹೀಗಾಗಿ ಈ ಬಗ್ಗೆ ಗಂಭೀರ ಚಿಂತನೆ ಮಾಡುತ್ತಿದ್ದೇವೆ ಎಂದು ಡಿಕೆ ಶಿವಕುಮಾರ್ ಹೇಳಿದ್ದಾರೆ.

ಕೆಪಿಎಸ್‌ಸಿ– ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ ಅಗತ್ಯವಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಇರುವ ರಾಜ್ಯ ಮಟ್ಟದ ಸ್ವಾಯತ್ತ ಸಂಸ್ಥೆಯಾಗಿದೆ. ಆದ್ರೆ ಇತ್ತೀಚಿಗೆ ಈ ಸಂಸ್ಥೆಯಲ್ಲಿ ಅಕ್ರಮ–ಭ್ರಷ್ಟಾಚಾರ ತಾಂಡವವಾಡ್ತಿರುವ ವಿಚಾರ ಬೆಳಕಿಗೆ ಬಂದಿದೆ.

ಹಿಂದೆ ವಿದ್ಯುತ್ ಸಚಿವರಾಗಿದ್ದಾಗ ಪಾರದರ್ಶಕ ನೇಮಕಾತಿ ನಡೆಸಿದ್ದನ್ನು ಅವರು ಸ್ಮರಿಸಿದರು. ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಸರಕಾರ ಬದ್ಧವಾಗಿದೆ ಎಂದು ಭರವಸೆ ನೀಡಿದರು.

# 12 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶ

**ಬೆಂಗಳೂರು:** ರಾಜ್ಯ ಸರ್ಕಾರ 12 ಮಂದಿ ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಡಾ.ತ್ರಿಲೋಕ್‌ಚಂದ್ರ ಕೆ.ವಿ. ಅವರನ್ನು ಕೃಷಿ ಇಲಾಖೆ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ. ಈ ಹುದ್ದೆಯಲ್ಲಿದ್ದ ಕ್ಯಾಪ್ಟನ್ ಡಾ.ರಾಜೇಂದ್ರ ಅವರನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶಿಸಿದೆ.

ಡಾ. ರಾಕೇಶ್ ಕುಮಾರ್ ಕೆ. ಅವರಿಗೆ ನೀಡಿದ್ದ ಸಮಾಜ ಕಲ್ಯಾಣ ಇಲಾಖೆ ಆಯುಕ್ತರ ಹುದ್ದೆಯ ಜವಾಬ್ದಾರಿಯನ್ನು ಹಿಂಪಡೆದಿದ್ದು, ಉಪ ಮುಖ್ಯಮಂತ್ರಿಗಳ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ. ಜೊತೆಗೆ ಭೂ ದಾಖಲೆಗಳು ಮತ್ತು ಸರ್ವೆ ಇಲಾಖೆ ಆಯುಕ್ತರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಲಾಗಿದೆ. ಈ ಹುದ್ದೆಯಲ್ಲಿದ್ದ ವೆಂಕಟ್ ರಾಜ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಡಾ. ಅರುಂಧತಿ ಚಂದ್ರಶೇಖರ್ ಅವರನ್ನು ಖಜಾನೆ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದ್ದು, ಈ ಹುದ್ದೆಯ ಹೊಣೆಗಾರಿಕೆಯಲ್ಲಿದ್ದ ರಘುನಂದನ್ ಮೂರ್ತಿ ಅವರನ್ನು ಬಿಡುಗಡೆಗೊಳಿಸಲಾಗಿದೆ.ಪಾಟೀಲ್ ಯಲಗೌಡ ಶಿವನಗೌಡ ಅವರನ್ನು ಗ್ರಾಮೀಣಾಭಿವೃದ್ಧಿ ಆಯುಕ್ತರ ಹುದ್ದೆಗೆ ವರ್ಗಾಯಿಸಲಾಗಿದೆ. ಈ ಹುದ್ದೆಯ ಸಮವರ್ತಿತ ಪ್ರಭಾರದಲ್ಲಿದ್ದ ಫೌಝಿಯ ತರನಮ್ ಬಿ. ಅವರನ್ನು ಬಿಡುಗಡೆಗೊಳಿಸಲಾಗಿದೆ. ಅಲ್ಲದೆ, ಪಾಟೀಲ್ ಯಲಗೌಡ ಶಿವನಗೌಡ ಅವರಿಗೆ ಪಂಚಾಯತ್ ರಾಜ್ ಆಯುಕ್ತರ ಹುದ್ದೆ ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಕಾರ್ಯ ನಿರ್ವಾಹಕ ನಿರ್ದೇಶಕರ ಹುದ್ದೆಯ ಹೆಚ್ಚುವರಿ ಹೊಣೆಗಾರಿಕೆ ನೀಡಿ ಆದೇಶಿಸಲಾಗಿದೆ. ವೈಶಾಲಿ ಎಂ.ಎಲ್. ಅವರನ್ನು ಎಂಎಸ್‌ಐಎಲ್‌ನ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾವಣೆ ಮಾಡಿದ್ದು, ಈ ಹುದ್ದೆಯ ಸಮವರ್ತಿತ ಪ್ರಭಾರದಲ್ಲಿದ್ದ ಲವಿಶ್ ಒರ್ಡಿಯ ಅವರನ್ನು ಬಿಡುಗಡೆಗೊಳಿಸಲಾಗಿದೆ.

# ಗುಬ್ಬಿ ತಾಲೂಕು ಕಚೇರಿಯಲ್ಲಿ ಭ್ರಷ್ಟಾಚಾರದ ಆರೋಪ: ಅಧಿಕಾರಿಗಳ ವಿರುದ್ಧ ದೂರು

ತುಮಕೂರು: ಗುಬ್ಬಿ ತಾಲೂಕು ಕಚೇರಿಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಭೂ ಕಬಳಿಕೆಗೆ ಸಹಕರಿಸಿರುವ ಆರೋಪ ಹಾಗೂ ತುಮಕೂರು ತಾಲೂಕು ಕಚೇರಿಯ ಅಧಿಕಾರಿ ಮತ್ತು ನೌಕರರ ವಿರುದ್ಧ ಕರ್ತವ್ಯ ಲೋಪ ಕೇಳಿಬಂದಿರುವ

ಹಿನ್ನೆಲೆಯಲ್ಲಿ,ಸಂಬಂಧಪಟ್ಟ ಅಧಿಕಾರಿಗಳು ಸಮಗ್ರ ಪರಿಶೀಲನೆ ನಡೆಸಿ ಮೂರು ದಿನದೊಳಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ತುಮಕೂರು ಉಪವಿಭಾಗಾಧಿಕಾರಿಗಳು ಆದೇಶ ನೀಡಿದ್ದಾರೆ.

ತಾಲೂಕು ಆಡಳಿತ ಕಚೇರಿಗಳಲ್ಲಿ ಸಾರ್ವಜನಿಕರ ಭೂಮಿ, ಆಸ್ತಿ ಮತ್ತು ಕಂದಾಯ ದಾಖಲೆಗಳಿಗೆ ಸಂಬಂಧಿಸಿದ ಕೆಲಸಗಳು ನಡೆಯುತ್ತವೆ. ಇಂತಹ ದಾಖಲೆಗಳ ನಿರ್ವಹಣೆಯಲ್ಲಿ ಯಾವುದೇ ಅಕ್ರಮ ನಡೆದರೆ, ಅದು ಸಾರ್ವಜನಿಕರ ಹಕ್ಕುಗಳು ಹಾಗೂ ಆಸ್ತಿ ಸುರಕ್ಷತೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಗುಬ್ಬಿ ತಾಲೂಕು ಕಚೇರಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಕುರಿತು ಸಲ್ಲಿಕೆಯಾಗಿರುವ ದೂರುಗಳು ಇದೀಗ ಆಡಳಿತಾತ್ಮಕ ಪರಿಶೀಲನೆಯ ಹಂತಕ್ಕೆ ತಲುಪಿವೆ.

ನಕಲಿ ದಾಖಲೆಗಳ ಮೂಲಕ ಭೂ ಕಬಳಿಕೆ ಆರೋಪ: ಗುಬ್ಬಿ ತಾಲೂಕು ಕಚೇರಿಯ ವ್ಯಾಪ್ತಿಯಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಅವುಗಳ ಆಧಾರದ ಮೇಲೆ ಭೂಮಿಗೆ ಸಂಬಂಧಿಸಿದ ವ್ಯವಹಾರಗಳನ್ನು ನಡೆಸಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಕೆಲವು ಅಧಿಕಾರಿಗಳು ಹಾಗೂ ಸಿಬ್ಬಂದಿ ತಮ್ಮ ಕರ್ತವ್ಯವನ್ನು ದುರುಪಯೋಗಪಡಿಸಿಕೊಂಡು ದಾಖಲೆಗಳನ್ನು ಸಿದ್ಧಪಡಿಸಲು ಸಹಕರಿಸಿದ್ದಾರೆ ಎಂಬ ದೂರಿನ ಅಂಶಗಳು ಪರಿಶೀಲನೆಗೆ ಒಳಪಡಲಿವೆ.

ಭೂಮಿಯ ಮಾಲೀಕತ್ವ, ಪಹಣಿ, ಖಾತೆ, ಆರ್‌ಟಿಸಿ, ಮ್ಯುಟೇಷನ್ ಸೇರಿದಂತೆ ವಿವಿಧ ಕಂದಾಯ ದಾಖಲೆಗಳು ಸಾರ್ವಜನಿಕರ ಆಸ್ತಿ ಹಕ್ಕುಗಳಿಗೆ ಸಂಬಂಧಿಸಿದ ಪ್ರಮುಖ ದಾಖಲೆಗಳಾಗಿವೆ. ಇವುಗಳಲ್ಲಿ ಯಾವುದೇ ರೀತಿಯ ತಿದ್ದುಪಡಿ, ನಕಲಿ ದಾಖಲೆ ಸೃಷ್ಟಿ ಅಥವಾ ಅಕ್ರಮ ಬದಲಾವಣೆ ನಡೆದಿದ್ದರೆ, ಅದರ ಪರಿಣಾಮವಾಗಿ ನಿಜವಾದ ಭೂ ಮಾಲೀಕರು ತೊಂದರೆ ಅನುಭವಿಸುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ ಗುಬ್ಬಿ ತಾಲೂಕು ಕಚೇರಿಯಲ್ಲಿ ದಾಖಲೆಗಳ ನಿರ್ವಹಣೆ, ಅಧಿಕಾರಿಗಳ ಪಾತ್ರ, ಅರ್ಜಿಗಳ ವಿಲೇವಾರಿ ಹಾಗೂ ಭೂಮಿಗೆ ಸಂಬಂಧಿಸಿದ ವ್ಯವಹಾರಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆಯೇ ಎಂಬುದನ್ನು ಪರಿಶೀಲಿಸುವ ಅಗತ್ಯವಿದೆ. ದೂರುಗಳಲ್ಲಿ ಉಲ್ಲೇಖಿಸಿರುವ ಆರೋಪಗಳು ಸತ್ಯವೇ ಅಥವಾ ಅಲ್ಲವೇ ಎಂಬುದನ್ನು ದಾಖಲೆಗಳು ಹಾಗೂ ಸಂಬಂಧಪಟ್ಟವರ ಹೇಳಿಕೆಗಳ ಆಧಾರದ ಮೇಲೆ ನಿರ್ಧರಿಸಬೇಕಾಗಿದೆ.

ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿರುದ್ಧ ದೂರು: ಗುಬ್ಬಿ ತಾಲೂಕು ಕಚೇರಿಯಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಹಾಗೂನಕಲಿ ದಾಖಲೆಗಳಿಗೆ ಸಂಬಂಧಿಸಿದಂತೆ ಕೆಲವು ಅಧಿಕಾರಿಗಳು ಮತ್ತು ಸಿಬ್ಬಂದಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರು ಸಲ್ಲಿಸಲಾಗಿದೆ. ದೂರುದಾರರು ಅಕ್ರಮಗಳಿಗೆ ಕಾರಣರಾದವರ ವಿರುದ್ಧ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರು ಕಂಡುಬಂದಲ್ಲಿ ಕಾನೂನುಬದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದ್ದಾರೆ ಎನ್ನಲಾಗಿದೆ.

ಇದರ ಜೊತೆಗೆ ತುಮಕೂರು ತಾಲೂಕು ಕಚೇರಿಯ ಅಧಿಕಾರಿ ಹಾಗೂ ನೌಕರರ ವಿರುದ್ಧವೂ ದೂರು ಸಲ್ಲಿಕೆಯಾಗಿದ್ದು, ಈ ಆರೋಪಗಳ ಬಗ್ಗೆಯೂ ಪರಿಶೀಲನೆ ನಡೆಸುವಂತೆ ಉಪವಿಭಾಗಾಧಿಕಾರಿಗಳು ಸೂಚಿಸಿದ್ದಾರೆ. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಕೆಲಸಗಳನ್ನು ನಿಯಮಾನುಸಾರ ಮತ್ತು ಪಾರದರ್ಶಕವಾಗಿ ನಿರ್ವಹಿಸುವುದು ಅಧಿಕಾರಿಗಳು ಹಾಗೂ ಸಿಬ್ಬಂದಿಯ ಜವಾಬ್ದಾರಿಯಾಗಿದೆ. ದಾಖಲೆಗಳ ವಿಚಾರದಲ್ಲಿ ಅಕ್ರಮ ನಡೆದಿದೆ ಎಂಬ ಆರೋಪಗಳು ಬಂದಾಗ, ಅವುಗಳ ಸತ್ಯಾಸತ್ಯತೆ ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಆಡಳಿತದ ಕರ್ತವ್ಯವಾಗಿದೆ. ಮೂರು ದಿನದೊಳಗೆ ವರದಿ ಸಲ್ಲಿಸಲು ಸೂಚನೆ: ದೂರುಗಳ ಗಂಭೀರತೆಯನ್ನು ಪರಿಗಣಿಸಿರುವ ತುಮಕೂರು ಉಪವಿಭಾಗಾಧಿಕಾರಿಗಳು, ಸಂಬಂಧಪಟ್ಟ ಅಧಿಕಾರಿಗಳಿಗೆ ಪರಿಶೀಲನೆ ನಡೆಸಿ ಮೂರು ದಿನದೊಳಗೆ ವಿವರವಾದ ವರದಿಯನ್ನು ಕಚೇರಿಗೆ ಸಲ್ಲಿಸುವಂತೆ ಆದೇಶ ನೀಡಿದ್ದಾರೆ.

ಪರಿಶೀಲನೆಯ ಸಂದರ್ಭದಲ್ಲಿ ದೂರುಗಳಲ್ಲಿ ಉಲ್ಲೇಖಿಸಿರುವ ದಾಖಲೆಗಳನ್ನು ಪರಿಶೀಲಿಸುವುದು, ಸಂಬಂಧಪಟ್ಟ ಕಚೇರಿಗಳಲ್ಲಿ ದಾಖಲೆಗಳ ಲಭ್ಯತೆ ಹಾಗೂ ಅವುಗಳ ಸತ್ಯಾಸತ್ಯತೆಯನ್ನು ದೃಢಪಡಿಸುವುದು, ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ಮತ್ತು ಅಧಿಕಾರಿಗಳ ಕರ್ತವ್ಯ ನಿರ್ವಹಣೆಯನ್ನು ಪರಿಶೀಲಿಸುವುದು ಪ್ರಮುಖವಾಗಲಿದೆ.

ಅಲ್ಲದೆ, ಆರೋಪಗಳಿಗೆ ಸಂಬಂಧಿಸಿದಂತೆ ದೂರುದಾರರು, ಅಧಿಕಾರಿಗಳು ಹಾಗೂ ಇತರ ಸಂಬಂಧಪಟ್ಟವರಿಂದ ಮಾಹಿತಿ ಪಡೆದು, ಅಗತ್ಯ ದಾಖಲೆಗಳನ್ನು ಸಂಗ್ರಹಿಸಿ ವರದಿ ಸಿದ್ಧಪಡಿಸುವ ಸಾಧ್ಯತೆ ಇದೆ. ಮೂರು ದಿನದ ಗಡುವಿನೊಳಗೆ ವರದಿ ಸಲ್ಲಿಸುವಂತೆ ನೀಡಿರುವ ಸೂಚನೆಯು ಈ ವಿಚಾರದಲ್ಲಿ ಆಡಳಿತಾತ್ಮಕ ಕ್ರಮಕ್ಕೆ ವೇಗ ನೀಡುವ ಉದ್ದೇಶ ಹೊಂದಿದೆ.

ದಾಖಲೆಗಳ ಪರಿಶೀಲನೆಯಿಂದ ಸತ್ಯ ಹೊರಬರಬೇಕಿದೆ: ಗುಬ್ಬಿ ತಾಲೂಕು ಕಚೇರಿಯಲ್ಲಿ ನಕಲಿ ದಾಖಲೆಗಳ ಮೂಲಕ ಭೂ ಕಬಳಿಕೆ ನಡೆದಿದೆ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿ ಆತಂಕ ಮೂಡಿಸಿವೆ. ಭೂಮಿ ಮತ್ತು ಕಂದಾಯ ದಾಖಲೆಗಳಿಗೆ ಸಂಬಂಧಿಸಿದ ಯಾವುದೇ ಅಕ್ರಮವು ಜನಸಾಮಾನ್ಯರ ವಿಶ್ವಾಸಕ್ಕೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇದೆ. ಹೀಗಾಗಿ ದೂರುಗಳ ಕುರಿತು ನಿಷ್ಪಕ್ಷಪಾತವಾಗಿ ಪರಿಶೀಲನೆ ನಡೆಸಿ, ಸತ್ಯಾಸತ್ಯತೆಯನ್ನು ಬಹಿರಂಗಪಡಿಸಬೇಕೆಂಬ ಒತ್ತಾಯಗಳು ಕೇಳಿಬರುತ್ತಿವೆ.

ತುಮಕೂರು ತಾಲೂಕು ಕಚೇರಿಯ ಅಧಿಕಾರಿ ಮತ್ತು ನೌಕರರ ವಿರುದ್ಧದ ದೂರಿನ ಬಗ್ಗೆಯೂ ಸಮಗ್ರ ತನಿಖೆ ನಡೆಸಿ, ತಪ್ಪು ನಡೆದಿದ್ದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂಬುದು ಸಾರ್ವಜನಿಕರ ನಿರೀಕ್ಷೆಯಾಗಿದೆ.

ಈಗ ಉಪವಿಭಾಗಾಧಿಕಾರಿಗಳ ಆದೇಶದ ಮೇರೆಗೆ ನಡೆಯಲಿರುವ ಪರಿಶೀಲನೆಯ ವರದಿ ಮಹತ್ವ ಪಡೆದುಕೊಂಡಿದೆ. ವರದಿಯಲ್ಲಿ ಯಾವ ಅಂಶಗಳು ಬಹಿರಂಗಗೊಳ್ಳಲಿವೆ? ನಕಲಿ ದಾಖಲೆಗಳ ಆರೋಪಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಗಳು ಪತ್ತೆಯಾಗಲಿವೆಯೇ? ಆರೋಪಗಳಲ್ಲಿ ಅಧಿಕಾರಿಗಳು ಅಥವಾ ಸಿಬ್ಬಂದಿಯ ಪಾತ್ರವಿರುವುದು ದೃಢಪಡಲಿದೆಯೇ? ಎಂಬ ಪ್ರಶ್ನೆಗಳಿಗೆ ಮುಂದಿನ ದಿನಗಳಲ್ಲಿ ಉತ್ತರ ದೊರೆಯಬೇಕಿದೆ.

ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ: ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ಅಥವಾ ದಾಖಲೆಗಳ ಅಕ್ರಮಕ್ಕೆ ಸಂಬಂಧಿಸಿದ ಆರೋಪಗಳು ಸಾಬೀತಾದಲ್ಲಿ, ನಿಯಮಾನುಸಾರ ಸಂಬಂಧಪಟ್ಟವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹ ಸಾರ್ವಜನಿಕರಿಂದ ವ್ಯಕ್ತವಾಗುತ್ತಿದೆ. ಅದೇ ವೇಳೆ, ದೂರುಗಳಲ್ಲಿ ಉಲ್ಲೇಖಿಸಿರುವ ಪ್ರತಿಯೊಬ್ಬರಿಗೂ ತಮ್ಮ ವಾದ ಮಂಡಿಸಲು ಅವಕಾಶ ನೀಡಿ, ದಾಖಲೆಗಳು ಮತ್ತು ಸಾಕ್ಷ್ಯಗಳ ಆಧಾರದ ಮೇಲೆ ನ್ಯಾಯಸಮ್ಮತವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಭೂಮಿ ಹಾಗೂ ಕಂದಾಯ ದಾಖಲೆಗಳ ವಿಚಾರದಲ್ಲಿ ಪಾರದರ್ಶಕತೆ ಕಾಪಾಡುವುದು, ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸುವುದು ಮತ್ತು ಅಧಿಕಾರಿಗಳ ಜವಾಬ್ದಾರಿಯನ್ನು ಖಚಿತಪಡಿಸುವುದು ಆಡಳಿತದ ಪ್ರಮುಖ ಕರ್ತವ್ಯವಾಗಿದೆ. ಮೂರು ದಿನದೊಳಗೆ ವರದಿ ಸಲ್ಲಿಸುವಂತೆ ಉಪವಿಭಾಗಾಧಿಕಾರಿಗಳು ನೀಡಿರುವ ಆದೇಶದ ಹಿನ್ನೆಲೆಯಲ್ಲಿ, ಗುಬ್ಬಿ ಹಾಗೂ ತುಮಕೂರು ತಾಲೂಕು ಕಚೇರಿಗಳ ವಿರುದ್ಧದ ದೂರುಗಳ ಪರಿಶೀಲನೆ ಮುಂದುವರಿಯಲಿದೆ. ಪರಿಶೀಲನಾ ವರದಿ ಸಲ್ಲಿಕೆಯಾದ ಬಳಿಕವೇ ಆರೋಪಗಳ ನೈಜ ಸ್ಥಿತಿ, ಅಧಿಕಾರಿಗಳು ಮತ್ತು ಸಿಬ್ಬಂದಿಯ ಪಾತ್ರ ಹಾಗೂ ಮುಂದಿನ ಕ್ರಮಗಳ ಕುರಿತು ಸ್ಪಷ್ಟ ಚಿತ್ರಣ ದೊರೆಯಲಿದೆ. ಈ ವರದಿಯಲ್ಲಿರುವ ಭ್ರಷ್ಟಾಚಾರ, ನಕಲಿ ದಾಖಲೆ ಹಾಗೂ ಅಧಿಕಾರಿಗಳು ಮತ್ತು ನೌಕರರ ವಿರುದ್ಧದ ಅಂಶಗಳು ದೂರುಗಳಲ್ಲಿ ಮಾಡಿರುವ ಆರೋಪಗಳಾಗಿವೆ. ಆರೋಪಗಳು ತನಿಖೆ ಅಥವಾ ಪರಿಶೀಲನೆಯ ಮೂಲಕ ಸಾಬೀತಾಗಬೇಕಿದೆ.

## ಕರವೇ ನಾರಾಯಣಗೌಡರಿಂದ ದಸರಾ ಉದ್ಘಾಟನೆ: ಅಭಿಮಾನಿಗಳ ಮನವಿ

**ಬೆಂಗಳೂರು:** ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವವನ್ನು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಅವರಿಂದ ಉದ್ಘಾಟನೆ ಮಾಡಿಸಬೇಕು ಎಂದು ಮಲ್ಟಿಸ್ಟಾರ್ ಶಿವರಾಜ್ ಕುಮಾರ್ ಅಭಿಮಾನಿಗಳ ಕ್ರೀಡಾ ಮತ್ತು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕೆ. ಚಂದ್ರಶೇಖರ್ (ಚನ್ನ) ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿದ್ದಾರೆ. ಈ ಕುರಿತು ಪತ್ರ ಬರೆದಿರುವ ಅವರು, ಕನ್ನಡ ನಾಡಿಗೆ ಯಾವುದೇ ತೊಂದರೆಯಾದರೂ ಮೊದಲು ಬೀದಿಗಿಳಿಯುವುದು ನಾರಾಯಣಗೌಡರು ಹಾಗೂ ಕರವೇ ಕಾರ್ಯಕರ್ತರು. ಆಂಗ್ಲ ನಾಮಫಲಕಗಳ ಹಾವಳಿ ತಗ್ಗಿಸುವಲ್ಲಿ ಇವರ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.